ಮಂಗಳೂರು ವಿಶ್ವವಿದ್ಯಾನಿಲಯ

ಭಾರತದ ಪ್ರಜಾತಂತ್ರದಲ್ಲಿ ಸಮಾಜವಾದಿಗಳ ಅನುಸಂಧಾನ

ಭಾರತದ ಪ್ರಜಾತಂತ್ರದಲ್ಲಿ ಸಮಾಜವಾದಿಗಳ ವಿಶೇಷ ನಡುಪ್ರವೇಶಗಳ ಮರುಪರಿಶೀಲನೆ

ರಾಜ್ಯಶಾಸ್ತ್ರದಲ್ಲಿ ಪಿ.ಎಚ್.ಡಿ ಪದವಿಗಾಗಿ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುತ್ತಿರುವ ಸಂಶೋಧನಾ ಅಂತಿಮ ಸಾರಲೇಖ

ಸಂಶೋಧನಾ ವಿದ್ಯಾರ್ಥಿ

ಸುಧಾ. ಯು

ಮಾರ್ಗದರ್ಶಕರು

ಪ್ರೊ. ರಾಜಾರಾಮ್ ತೋಳ್ಪಾಡಿ

ನಿವೃತ್ತ ಪ್ರಾಧ್ಯಾಪಕರು

ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ

ಮಂಗಳಗಂಗೋತ್ರಿ – 574199

2022

ಭಾರತದ ಪ್ರಜಾತಂತ್ರದಲ್ಲಿ ಸಮಾಜವಾದಿಗಳ ಅನುಸಂಧಾನ

ಭಾರತದ ಪ್ರಜಾತಂತ್ರದಲ್ಲಿ ಸಮಾಜವಾದಿಗಳ ವಿಶೇಷ ನಡುಪ್ರವೇಶಗಳ ಮರುಪರಿಶೀಲನೆ

ಪ್ರಸ್ತಾವನೆ

ಇಂದು ಜಗತ್ತಿನಾದ್ಯಂತ ಪ್ರಜಾತಂತ್ರವೆನ್ನುವ ತಾತ್ತ್ವಿಕ ರಾಜಕೀಯ ವಿದ್ಯಮಾನ ಸರ್ವರ ಸಮ್ಮತಿಯನ್ನು ಪಡೆದ ವಿಶಿಷ್ಟ ಚಿಂತನೆ. ತಾತ್ತ್ವಿಕವಾಗಿ ಅದು ಚರ್ಚೆ, ಸಂವಾದ, ಸಹಮತಗಳ ಮೂಲಕ ಸಾರ್ವಜನಿಕ ಒಳಿತನ್ನು ಸಾಧಿಸುವ ಒಂದು ವೈಚಾರಿಕ ದೃಷ್ಟಿಕೋನ. ಎಷ್ಟೇ ಕ್ರೂರಿಯಾದ ಸರ್ವಾಧಿಕಾರಿಯಾಗಿರಲಿ ಅಥವಾ ಪ್ರಜಾತಾಂತ್ರಿಕ ವ್ಯವಸ್ಥೆಯೊಳಗಿನ ನಾಯಕನಾಗಿರಲಿ ಆತ ತನ್ನನ್ನು ತಾನು ಪ್ರಜಾತಂತ್ರವಾದಿ ಎಂದು ಕರೆಯಿಸಿಕೊಳ್ಳಲು ಇಷ್ಟಪಡುತ್ತಾನೆ. ಇದು ಪ್ರಜಾತಂತ್ರದ ಸರ್ವಸಮ್ಮತವನ್ನು ಅಥವಾ ಅವಿರೋಧ ಅಂಗೀಕಾರವನ್ನು ಬಿಂಬಿಸುವ ಒಂದು ಜಾಗತಿಕ ನಿದರ್ಶನ. ಪ್ರಪಂಚದಾದ್ಯಂತ ಎಲ್ಲ ಜನಸಮುದಾಯಗಳು ತಮ್ಮ ಅಸ್ಮಿತೆ ಮತ್ತು ಅಸ್ತಿತ್ವಗಳ ನೆಲೆಯಲ್ಲಿ ಪ್ರಜಾತಂತ್ರವನ್ನು ಪ್ರತಿಪಾದಿಸಲು ಪ್ರಯತ್ನಿಸುತ್ತಾ ಬಂದಿವೆ. ಸಂವಿಧಾನದ ರಚನೆ, ಸಂಸತ್ತಿನ ಕಲಾಪಗಳು, ವಿವಿಧ ರಾಜಕೀಯ ಪಕ್ಷಗಳ ಸ್ಥಾಪನೆ ಮತ್ತು ನಿಯತಕಾಲಿಕ ಚುನಾವಣೆಗಳು ಪ್ರಜಾತಂತ್ರದ ತಾತ್ತ್ವಿಕ ಧ್ಯೇಯ್ಯೋದ್ದೇಶಗಳನ್ನು ಸಾಕಾರಗೊಳಿಸಲು ರೂಪಿಸಿಕೊಂಡ ಕಾರ್ಯವಿಧಾನದ ವಿವಿಧ ಆಯಾಮಗಳಾಗಿವೆ. ಭಾರತದಂತಹ ಅಸಮಾನ ಸಮಾಜದಲ್ಲಿ ಕಳೆದ ಏಳು ದಶಕಗಳಲ್ಲಿ ಪ್ರಜಾತಂತ್ರ ಹಲವು ಏಳುಬೀಳುಗಳ ನಡುವೆ ತನ್ನ ಅರ್ಥ ಮತ್ತು ಆಳಗಳನ್ನು ಪಡೆದುಕೊಂಡಿದೆ. ಸಾರ್ವಜನಿಕ ಒಳಿತಿನ ಆಶಯವನ್ನು ತನ್ನದೇ ಆದ ನಿರ್ದಿಷ್ಟ ವಿಧಾನದಲ್ಲಿ ಪ್ರತಿಪಾದಿಸುವ ಪ್ರಜಾತಂತ್ರ ತನ್ನ ಅನೇಕ ತಾತ್ತ್ವಿಕ ಮತ್ತು ರಾಜಕೀಯ ಲೋಪದೋಷಗಳಿಂದ ಮುಕ್ತವಾಗಿಲ್ಲವಾದರೂ ಮಾನವ ಜನಾಂಗದ ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಬದುಕಿನಲ್ಲಿ ಅದು ಆಳವಾಗಿ ನೆಲೆಯೂರುವ ಪ್ರಯತ್ನವನ್ನು ಮಾಡುತ್ತಲೇ ಇದೆ.

ಮೂಲತ: ಪಾಶ್ಚಿಮಾತ್ಯ ಸಮಾಜಗಳ ಸಾಂಸ್ಕೃತಿಕ ಪರಿಪ್ರೇಕ್ಷ್ಯದಲ್ಲಿ ರೂಪುಗೊಂಡ ಪ್ರಜಾತಂತ್ರವೆನ್ನುವ ತಾತ್ತ್ವಿಕ ರಾಜಕೀಯ ವಿದ್ಯಮಾನಕ್ಕೆ ಒಂದು ಸುದೀರ್ಘವಾದ ಇತಿಹಾಸವಿದೆ. ಅದು ಮೊದಲಿಗೆ ಪ್ರಾಚೀನ ಗ್ರೀಕ್ ದೇಶದಲ್ಲಿ ಜನ್ಮತಳೆದರೂ ಅದರ ರೂಪ ವಿಸ್ತಾರಗೊಂಡದ್ದು ಆಧುನಿಕ ಯುರೋಪಿನ ಸಾಂಸ್ಕೃತಿಕ ಪರಿಪೇಕ್ಷ್ಯದಲ್ಲಿ ಎನ್ನಬಹುದು. ಪಾಶ್ಚಿಮಾತ್ಯ ಸಮಾಜಗಳಲ್ಲಿ ಪ್ರಚಲಿತಗೊಂಡ ಪ್ರಜಾತಂತ್ರವೆನ್ನುವ ತಾತ್ತ್ವಿಕ ರಾಜಕೀಯ ವಿದ್ಯಮಾನ ಬೇರೆ ಬೇರೆ ದೇಶ ಹಾಗೂ ಸಮಾಜಗಳಲ್ಲಿ ವಿಭಿನ್ನ ರೂಪಗಳನ್ನು ತಳೆದಿದೆ. ಯುರೋಪಿನ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಪರಿಪೇಕ್ಷ್ಯದಲ್ಲಿ ರೂಪುಗೊಂಡ ಪ್ರಜಾತಂತ್ರ ಒಂದು ದೀರ್ಘ ಕಾಲಾವಧಿಯಲ್ಲಿ ಹಲವಾರು ವಿಭಿನ್ನ ಚಿಂತನ ಕ್ರಮಗಳೊಂದಿಗೆ ಬೆಸೆದುಕೊಂಡು, ಒಂದು ವಿಶಿಷ್ಟವಾದ ವಿಚಾರ ಪಂಥವಾಗಿ ಮತ್ತು ರಾಜಕೀಯ ವ್ಯವಸ್ಥೆಯಾಗಿ ರೂಪುಗೊಂಡಿದೆ.

ಈ ಹಿನ್ನೆಲೆಯಲ್ಲಿ ಅತ್ಯಂತ ಸಂಕೀರ್ಣವಾದ ಮತ್ತು ಅನೇಕ ಬಗೆಯ ಕ್ಲಿಷ್ಟತೆಗಳಿಂದ ಕೂಡಿದ ಪ್ರಜಾತಂತ್ರದ ಚರಿತ್ರೆ ಮತ್ತು ಸಂಕಥನಗಳನ್ನು ಕನಿಷ್ಠ ಮೂರು ಹಂತಗಳಲ್ಲಿ ಗುರುತಿಸಬಹುದು. ಅದರಲ್ಲಿ ಮೊದಲನೆಯದು, ಪ್ರಾಚೀನ ಗ್ರೀಸ್ ದೇಶದ ಶೈಶವಾವಸ್ಥೆಯ ಪ್ರಜಾತಂತ್ರ, ಎರಡನೆಯದು, ಸ್ವಲ್ಪ ವಿಸ್ತಾರದಲ್ಲಿ ಚರ್ಚಿಸಬೇಕಾದ ಪ್ರಜಾತಂತ್ರದ ಐರೋಪ್ಯ ಚರಿತ್ರೆ ಮತ್ತು ಅದು ಉತ್ಪಾದಿಸಿದ ಬಹುರೂಪಿ ರಾಜಕೀಯ ಸಂಕಥನ ಹಾಗೂ ಮೂರನೆಯದು, ವಸಾಹತುಶಾಹಿ ಸಂದರ್ಭದಲ್ಲಿ ಭಾರತದಂತಹ ನತದೃಷ್ಟ ಸಮಾಜಗಳು ಪ್ರಜಾತಂತ್ರವನ್ನು ತಮ್ಮದಾಗಿಸಿಕೊಳ್ಳಲು ಪಟ್ಟ ಪರಿಶ್ರಮದ ಇತಿಹಾಸ[1].

ಪ್ರಜಾತಂತ್ರದ ಪ್ರಾಚೀನ ಇತಿಹಾಸ ಗ್ರೀಸ್ ದೇಶದ ಅದರಲ್ಲೂ ವಿಶೇಷವಾಗಿ ಅಥೆನ್ಸ್ ಎನ್ನುವ ಸಣ್ಣ ನಗರ ರಾಜ್ಯದ ರಾಜಕಾರಣದಲ್ಲಿ ವ್ಯಕ್ತಗೊಳ್ಳುತ್ತದೆ. ಅಥೆನ್ಸ್ ಅತ್ಯಂತ ಕಮ್ಮಿ ಪ್ರಮಾಣದ ಜನಸಂಖ್ಯೆಯನ್ನು ಹೊಂದಿರುವ ನಗರ ರಾಜ್ಯ. ಅಲ್ಲಿನ ಜನರೆಲ್ಲ ಒಂದು ಕಡೆ ಸೇರಿ ಸರ್ವಾನುಮತದ ನೆಲೆಯಲ್ಲಿ ತಮ್ಮ

[1] Sabine, George Holland. "A History of Political Theory", US: Dryden Press, 1937.

ನಗರರಾಜ್ಯದ ಸಾರ್ವಜನಿಕ ನೀತಿ ನಿಯಮಗಳನ್ನು ರೂಪಿಸಿಕೊಳ್ಳುತ್ತಿದ್ದರು. ಅಥೆನ್ಸ್ ನಗರದ ಈ ಪ್ರಜಾತಂತ್ರದ ರೂಪುರೇಷೆಗಳಲ್ಲಿ ಹುದುಗಿರುವ ವಿಲಕ್ಷಣಗಳೇನೇ ಇದ್ದರೂ ಅದನ್ನು ಸಮಕಾಲೀನ ಪ್ರಜಾತಂತ್ರದ ನಮ್ಮ ಇತಿಹಾಸದಲ್ಲಿ ನೇರ ಪ್ರಜಾತಂತ್ರದ ಮಾದರಿ ಎಂದೇ ಗುರುತಿಸಲಾಗುತ್ತದೆ ಮತ್ತು ಈ ನೇರ ಪ್ರಜಾತಂತ್ರದ ಮಾದರಿಯ ಅವಶ್ಯಕತೆ ಅಥವಾ ಅನಿವಾರ್ಯತೆ ಪ್ರಸಕ್ತ ಪ್ರಜಾತಂತ್ರಿಕ ಸಂಕಥನದಲ್ಲಿ ಮತ್ತೆ ಮತ್ತೆ ಮೇಲೆದ್ದು ಬರುತ್ತಿದೆ. ಇಂದು ನಾವು ಪಾಲ್ಗೊಳ್ಳುವಿಕೆಯ ಪ್ರಜಾತಂತ್ರ (Participatory Democracy) ಎಂದು ಕರೆಯುವ ವಿದ್ಯಮಾನ ಅಥೆನ್ಸ್‌ನ ನೇರ ಪ್ರಜಾತಂತ್ರದ ಪ್ರತಿಧ್ವನಿಯಲ್ಲದೆ ಮತ್ತಿನ್ನೇನು?

ಆದರೆ ಪ್ರಜಾತಂತ್ರದ ವಿವಿಧ ತಾತ್ತ್ವಿಕ ಹಾಗೂ ರಾಜಕೀಯ ಆಯಾಮಗಳನ್ನು ಬಿಂಬಿಸುವ ಮತ್ತು ಪ್ರತಿಬಿಂಬಿಸುವ ಸಮೃದ್ಧ ಸಂಕಥನವನ್ನು ಅದರ ಆಧುನಿಕ ಐರೋಪ್ಯ ಮಾದರಿಗಳಲ್ಲಿ ಕಾಣಬಹುದು. ಇಂದು ನಾವು ಪ್ರಜಾತಂತ್ರವೆಂದು ಕರೆಯುವ, ಪ್ರತಿಪಾದಿಸುವ ಮತ್ತು ಪರಿಪಾಲಿಸಲು ಯತ್ನಿಸುವ ವಿದ್ಯಮಾನ ಬಹುಮಟ್ಟಿಗೆ ಐರೋಪ್ಯ ಚರಿತ್ರೆಯ ನಮ್ಮ ತಿಳುವಳಿಕೆಯಿಂದಲೇ ಬಂದುದಾಗಿದೆ.

ಪ್ರಜಾತಂತ್ರಕ್ಕೆ ಕನಿಷ್ಠ 3 ಶತಮಾನಗಳ ಸಮೃದ್ಧ ಐರೋಪ್ಯ ಚರಿತ್ರೆಯಿದೆ. ಫ್ರೆಂಚ್ ಮಹಾಕ್ರಾಂತಿಯಲ್ಲಿ ಪ್ರಪ್ರಥಮ ಬಾರಿಗೆ ಘೋಷಿಸಲಾದ ಸ್ವಾತಂತ್ರ್ಯ, ಸಮಾನತೆ ಮತ್ತು ಸಹೋದರತೆಯ ಮೌಲ್ಯಗಳನ್ನು ನಾವು ಇಂದಿಗೂ ಪ್ರಜಾತಂತ್ರದ ಬುನಾದಿ ವಿಚಾರಗಳು ಎಂದು ಪರಿಗಣಿಸುತ್ತೇವೆ. ತದನಂತರದಲ್ಲಿ ಯುರೋಪಿನ ವಿವಿಧ ಸಮಾಜಗಳಲ್ಲಿ ಪ್ರಜಾತಂತ್ರ ಇತರ ಅನೇಕ ಆಧುನಿಕ ವಿಚಾರ ಹಾಗೂ ವಿದ್ಯಮಾನಗಳ ಜೊತೆಗೂಡಿ ಒಂದು ಸಮಗ್ರವಾದ ರಾಜಕೀಯ ಸಿದ್ಧಾಂತವಾಗಿ ರೂಪುಗೊಂಡಿದೆ. ಹಾಗಾಗಿ, ಪ್ರಜಾತಂತ್ರವನ್ನು ಏಕರೂಪದ ಘನ ಸಿದ್ಧಾಂತವೆಂದು ಭಾವಿಸುವ ಬದಲು ಅನೇಕ ಆಶೋತ್ತರಗಳ ಒಂದು ಕೂಡು ಕುಟುಂಬವೆಂದು ತಿಳಿಯುವುದು ಹೆಚ್ಚು ಸೂಕ್ತವಾಗುತ್ತದೆ. ಈ ಕುರಿತು ವಿಸ್ತೃತವಾಗಿ ನಿಷ್ಕರ್ಷಿಸುವುದು ಈ ಅಧ್ಯಯನದ ವ್ಯಾಪ್ತಿಗೆ ಹೊರತಾಗಿದ್ದರೂ ಕೆಲವು ಅಂಶಗಳನ್ನು ಇಲ್ಲಿ ನಮೂದಿಸಲೇಬೇಕು.

ಮೊದಲನೆಯದಾಗಿ, ಪ್ರಜಾತಂತ್ರದ ಐರೋಪ್ಯ ಚರಿತ್ರೆ ಏಕರೂಪವಾದದ್ದಲ್ಲ. ಬೇರೆ ಬೇರೆ ದೇಶಗಳಲ್ಲಿ ಅದು ಬೇರೆ ಬೇರೆ ಬಗೆಯ ಚರಿತ್ರೆಗಳಿಂದ ತನ್ನ ಆಕಾರವನ್ನು ಪಡೆದುಕೊಂಡಿದೆ. ಉದಾಹರಣೆಗೆ: ಇಂಗ್ಲೆಂಡಿನಲ್ಲಿ ಅದರ ಚರಿತ್ರೆ ರಾಜತ್ವದಿಂದ ಪ್ರಜಾಪ್ರಭುತ್ವಕ್ಕೆ ನಿಧಾನವಾಗಿ ಬದಲಾದ ಚರಿತ್ರೆಯಾದರೆ, ಫ್ರಾನ್ಸಿನಲ್ಲಿ ಅದು ಒಂದು ಅರ್ಥದಲ್ಲಿ ರಾಜಕೀಯ ವ್ಯವಸ್ಥೆಯ ಮೂಲಭೂತ ಪರಿವರ್ತನೆಯನ್ನು ಸಂಕೇತಿಸುತ್ತದೆ. ಹೀಗಾಗಿ, ಯುರೋಪಿನ ಪ್ರಜಾತಂತ್ರವನ್ನು ಚರಿತ್ರೆ ಮತ್ತು ಸಿದ್ಧಾಂತ ಇವೆರಡರ ದೃಷ್ಟಿಯಿಂದಲೂ ಬಹುರೂಪಿ ಎಂದು ಪರಿಗಣಿಸಬೇಕಾಗುತ್ತದೆ.[2]

ಎರಡನೆಯದಾಗಿ, ಪ್ರಜಾತಂತ್ರದ ಯುರೋಪಿನ ಇತಿಹಾಸದಲ್ಲಿ ಅನೇಕ ವಿಭಿನ್ನ ತಾತ್ತ್ವಿಕ ವಿದ್ಯಮಾನಗಳ ಸಮ್ಮಿಲನವನ್ನು ಕಾಣಬಹುದು. ಉದಾಹರಣೆಗೆ: ಹೆಚ್ಚು ಕಮ್ಮಿ ಪ್ರಜಾತಂತ್ರದ ಜೊತೆಜೊತೆಗೆ ಅಸ್ತಿತ್ವಕ್ಕೆ ಬಂದ ಸಾಂವಿಧಾನಿಕ ಆಡಳಿತದ ಕಲ್ಪನೆ (Constitutionalism), ರಾಜ್ಯ ಹಾಗೂ ಧರ್ಮಗಳ ನಡುವೆ ವ್ಯತ್ಯಾಸವನ್ನು ಪ್ರತಿಪಾದಿಸುವ ಸೆಕ್ಯುಲರ್‌ವಾದದ ಕಲ್ಪನೆ, ಆಧುನಿಕ ಕಾಲದಲ್ಲಿ ಉತ್ಕರ್ಷಕ್ಕೆ ಬಂದ ರಾಷ್ಟ್ರ ಪ್ರಭುತ್ವದ ಕಲ್ಪನೆ ಮತ್ತು ಯುರೋಪಿನ ಜ್ಞಾನ ಪರ್ವದ ಉತ್ಪನ್ನಗಳಾದ ಸ್ವಾತಂತ್ರ್ಯ, ಸಮಾನತೆ, ವೈಚಾರಿಕತೆ, ಕಾನೂನಿನ ಆಡಳಿತ, ನ್ಯಾಯ ಹಾಗೂ ನಾಗರಿಕತ್ವದ ಕಲ್ಪನೆಗಳು ಪ್ರಜಾತಂತ್ರದ ತಾತ್ತ್ವಿಕ ವಿಶ್ವದಲ್ಲಿ ಹಾಸುಹೊಕ್ಕಂತೆ ಇವೆ.[3]

ಮೂರನೆಯದಾಗಿ, ಆಧುನಿಕ ಯುರೋಪಿನಲ್ಲಿ ಸಂಭವಿಸಿದ ಅನೇಕಾನೇಕ ಆರ್ಥಿಕ ಹಾಗೂ ಸಾಮಾಜಿಕ ವಿದ್ಯಮಾನಗಳು ಪ್ರಜಾತಂತ್ರವನ್ನು ರೂಪಿಸಿವೆ ಅಥವಾ ಅದನ್ನು ರೂಪಾಂತರಿಸಿವೆ. ಉದಾಹರಣೆಗೆ: ಬಂಡವಾಳಶಾಹಿ ಎನ್ನುವ ಅದಮ್ಯವಾದ ಆರ್ಥಿಕ ವಿದ್ಯಮಾನ ಮತ್ತು ಹೆಚ್ಚು ಕಮ್ಮಿ

---

[2] Dahl, Robert. "Democracy and its critics", London: Yale University Press, 1991

[3] River, Charles. "Western Democracy: The History and Legacy of Representative Governments in the west from the Ancient world to today", USA: Charles River Editors, 2020

ಅದರರದೇ ರಾಜಕೀಯ ಸಿದ್ಧಾಂತವಾದ ಲಿಬರೆಲ್‌ವಾದ, ಪ್ರಜಾತಂತ್ರವನ್ನು ಒಂದು ನಿರ್ದಿಷ್ಟ ದಿಸೆಯಲ್ಲಿ ಕರೆದೊಯ್ದಿದೆ ಮತ್ತು ಅದನ್ನು ತನ್ನ ಸೈದ್ಧಾಂತಿಕ ಜಾಯಮಾನಕ್ಕೆ ಅನುಗುಣವಾಗಿ ನಿರ್ವಚಿಸಿದೆ. ಅಂತೆಯೇ, ಯುರೋಪಿನ ಆಧುನಿಕ ಚರಿತ್ರೆಯಲ್ಲಿ ರೂಪುಗೊಂಡ ಅನೇಕ ಬಗೆಯ ಸಮಾಜವಾದಿ ಸಿದ್ಧಾಂತಗಳು ತಮ್ಮ ತಮ್ಮ ಭಾವಕ್ಕನುಗುಣವಾಗಿ ಪ್ರಜಾತಂತ್ರವನ್ನು ಪರಿಕಲ್ಪಿಸಿವೆ. ಇದರಿಂದಾಗಿ, ಪ್ರಜಾತಂತ್ರದ ರೂಪುರೇಷೆ ಮತ್ತು ಕಾರ್ಯಸೂಚಿಗಳು ವಿಭಿನ್ನ ವ್ಯಾಖ್ಯಾನಗಳಿಗೆ ಒಳಗಾಗಿವೆ. ಅಷ್ಟು ಮಾತ್ರವಲ್ಲದೇ, ಯುರೋಪಿನ ಚಾರಿತ್ರಿಕ ಪ್ರಕ್ರಿಯೆಯಲ್ಲಿ ಪ್ರಜಾತಂತ್ರ ಇಂದು ಪ್ರಾತಿನಿಧಿಕ ಪ್ರಜಾತಂತ್ರವಾಗಿ ಸಾಂವಿಧಾನಿಕತೆಯ ಚೌಕಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದೆ.

ಹೀಗೆ ಆಧುನಿಕ ಯುರೋಪಿನ ಸುದೀರ್ಘ ಇತಿಹಾಸದಲ್ಲಿ ರೂಪುಗೊಂಡ ಪ್ರಜಾತಂತ್ರದ ಸಂಕಥನ ಮತ್ತು ರಾಜಕಾರಣ ಅನೇಕ ಸಂಕೀರ್ಣ ಆಯಾಮಗಳನ್ನು ಹಾಗೂ ಪದರಗಳನ್ನು ತನ್ನ ಗರ್ಭದಲ್ಲಿ ಧರಿಸಿಕೊಂಡಿದೆ. ಹೀಗಾಗಿ, ಅದು ಅನೇಕರನ್ನು ಅನೇಕ ರೂಪಗಳಲ್ಲಿ ಎದುರಾಗುತ್ತದೆ ಮತ್ತು ಅನೇಕ ವ್ಯಾಖ್ಯಾನಗಳಿಗೆ ಒಳಗಾಗುತ್ತದೆ. ಆದ್ದರಿಂದಲೇ, ಪ್ರಸಕ್ತ ಜಾಗತಿಕ ಸಂದರ್ಭದಲ್ಲಿ ಪ್ರಜಾತಂತ್ರವನ್ನು ಅನೇಕ ಅವತಾರಗಳಲ್ಲಿ ಅಥವಾ ವೈಚಾರಿಕ ಸಂಕಥನಗಳಲ್ಲಿ ಕಾಣಬಹುದು. ಉದಾಹರಣೆಗೆ; ಲಿಬರಲ್ ಚಿಂತನೆಯ ಚೌಕಟ್ಟಿನಿಂದ ಹೊರಹೊಮ್ಮಿದ ಪ್ರಜಾತಂತ್ರದ ಕಲ್ಪನೆಯನ್ನು ಲಿಬರಲ್ ಪ್ರಜಾತಂತ್ರವೆಂದು, ಸಮಾಜವಾದಿ ಚಿಂತನೆಯ ನೆಲೆಯಿಂದ ಪ್ರಸ್ತುತಪಡಿಸಲಾದ ಪ್ರಜಾತಂತ್ರವನ್ನು ಸಾಮಾಜಿಕ ಪ್ರಜಾತಂತ್ರವೆಂದು ಕರೆಯಬಹುದು. ಹೀಗೆ ಪ್ರಜಾತಂತ್ರಕ್ಕೆ ನೀಡಲಾದ ವಿಭಿನ್ನ ತಾತ್ತ್ವಿಕ ಒತ್ತುಗಳ ಕಾರಣಗಳಿಂದಾಗಿ ಸಾಂಪ್ರದಾಯಿಕ ಪ್ರಜಾತಂತ್ರ, ಕ್ರಾಂತಿಕಾರಿ ಪ್ರಜಾತಂತ್ರ, ಸಮಾನತವಾದಿ ಪ್ರಜಾತಂತ್ರ, ವಿವೇಚನಾಶೀಲ ಪ್ರಜಾತಂತ್ರ ಮೊದಲಾದ ವಿವಿಧ ನಾಮ ಪದಗಳಲ್ಲಿ ಅದನ್ನು ಗುರುತಿಸಲಾಗುತ್ತದೆ.

ಹಾಗಿದ್ದೂ, ಪ್ರಜಾತಂತ್ರದ ತಾತ್ತ್ವಿಕ ನೆಲೆಗಟ್ಟಿನಲ್ಲಿ ಅತ್ಯಂತ ಪ್ರಮುಖವಾದ ಕೆಲವು ಕೇಂದ್ರ ಪರಿಕಲ್ಪನೆಗಳನ್ನು ಅನಿವಾರ್ಯವೆಂದು ಗುರುತಿಸಲಾಗಿದೆ. ಪ್ರಜಾತಂತ್ರವನ್ನು ರಾಜಕಾರಣದ ವಸ್ತು ಸತ್ಯದಲ್ಲಿ ಹೇಗೆ ನಿರೂಪಿಸಿದರೂ, ಅದರ ಅತ್ಯಂತ ಕೇಂದ್ರ ಪರಿಕಲ್ಪನೆಗಳಿಂದ ಪ್ರಜಾತಂತ್ರವನ್ನು ಬೇರ್ಪಡಿಸಲಾಗದು. ಕಳೆದ 50 ವರ್ಷಗಳಲ್ಲಿ ಪ್ರಜಾತಂತ್ರದ ಕುರಿತು ನಡೆದ ಶೈಕ್ಷಣಿಕ ಚರ್ಚೆಗಳಲ್ಲಿ ಈ ಕೆಳಗಿನ ನಾಲ್ಕು ತತ್ತ್ವಗಳನ್ನು ಅದರ ಅತ್ಯಂತ ನಡುವಿನ ಪರಿಕಲ್ಪನೆಗಳೆಂದು ಪರಿಗಣಿಸಲಾಗಿದೆ. [4]

ಮೊದಲನೆಯದಾಗಿ, ಪ್ರಜಾತಂತ್ರದಲ್ಲಿ ವಿವೇಚನಾಶೀಲ ಸಂವಾದವನ್ನು ಅದರ ಪ್ರಪ್ರಥಮ ತತ್ತ್ವವೆಂದು ಪರಿಗಣಿಸಲಾಗಿದೆ. ತತ್ತ್ವಜ್ಞಾನೀಯವಾಗಿ ಪ್ರಜಾತಂತ್ರ ಸಿದ್ಧ ಸತ್ಯದ (Apriori Truth) ಪರಿಕಲ್ಪನೆಯನ್ನು ನಿರಾಕರಿಸುತ್ತದೆ. ಅದರ ಪ್ರಕಾರ ಸತ್ಯವೆನ್ನುವುದು ನಿರಂತರ ಸಂವಾದದಲ್ಲಿ ರೂಪುಗೊಳ್ಳುವ ಮತ್ತು ಮೊನಚುಗೊಳ್ಳುವ ವಿದ್ಯಮಾನ. ಪ್ರಜಾತಂತ್ರದ ಈ ತತ್ತ್ವಜ್ಞಾನೀಯ ನೋಟವನ್ನು ರಾಜಕೀಯ ಸಂದರ್ಭಕ್ಕೆ ಅನ್ವಯಿಸಿದಾಗ ಸಾರ್ವಜನಿಕ ಒಳಿತು ಎನ್ನುವುದು ಸಾಮುದಾಯಿಕ ಸಂವಾದದ ಉತ್ಪನ್ನ ಎಂದಾಗುತ್ತದೆ. ಹೀಗೆ, ರಾಜಕೀಯ ತತ್ತ್ವಜ್ಞಾನದ ನೆಲೆಯಲ್ಲಿ ಪ್ರಜಾತಂತ್ರ ಸಾಮುದಾಯಿಕ ವಿವೇಚನೆಯಿಂದ ರೂಪ ತಳೆಯುವ ಸಾರ್ವಜನಿಕ ಒಳಿತಿನ ಕಲ್ಪನೆಯನ್ನು ಪ್ರತಿಪಾದಿಸುತ್ತದೆ. ಆದ್ದರಿಂದಲೇ, ವಿವೇಚನಾಶೀಲ ಸಂವಾದವನ್ನು ಪ್ರಜಾತಂತ್ರದ ಮೊಟ್ಟ ಮೊದಲ ಪರಿಕಲ್ಪನೆಯೆಂದು ತಿಳಿಯಲಾಗಿದೆ.

ಎರಡನೆಯದಾಗಿ, ಪ್ರಜಾತಂತ್ರ ಒಂದು ಸಾಮುದಾಯಿಕ ಅಸ್ಮಿತೆಯ ಬಗೆಗಿನ ನಿಷ್ಠೆಯ ಮೇಲೆ ನಿಂತಿದೆ. ಪ್ರಜಾತಾಂತ್ರಿಕ ಪ್ರಕ್ರಿಯೆಯಲ್ಲಿ ಒಳಗೊಳ್ಳುವ ಸದಸ್ಯರು ಅಥವಾ ಪ್ರಜಾತಾಂತ್ರಿಕ ಸಮಾಜದ ಪ್ರಜೆಗಳು ತಮ್ಮನ್ನು ಒಂದು ಸಮುದಾಯವೆಂದು ಭಾವಿಸಿದಲ್ಲಿ ಮಾತ್ರ ಎಲ್ಲರಿಗೂ ಒಪ್ಪಿಗೆಯಾಗುವ ಸಾರ್ವಜನಿಕ ಒಳಿತಿನ ಅಥವಾ ಸಾರ್ವಜನಿಕ ನೀತಿಯ ವಿವೇಚನಾಶೀಲ ಸಂವಾದ ಸಾಧ್ಯವಾಗುತ್ತದೆ. ಹಾಗಾಗೀ,

---

[4] Dahl, Robert. "Democracy and its Critics", London: Yale University Press, 1991

ಪ್ರಜಾತಾಂತ್ರಿಕ ಸಮುದಾಯವನ್ನು ಒಂದುಗೂಡಿಸುವ ಒಂದು ಒಡನಾಟದ ಸಿದ್ಧಾಂತ ಅಥವಾ ನಿಷ್ಠಾತತ್ತ್ವವನ್ನು ಪ್ರಜಾತಂತ್ರದ ಎರಡನೆಯ ಪ್ರಮುಖ ಪರಿಕಲ್ಪನೆಯೆಂದು ತಿಳಿಯಲಾಗಿದೆ.

ಮೂರನೆಯದಾಗಿ, ಜನರ ಸಕ್ರಿಯ ಭಾಗವಹಿಸುವಿಕೆಯನ್ನು ಪ್ರಜಾತಂತ್ರದ ಮೂರನೆಯ ಪ್ರಮುಖ ಪರಿಕಲ್ಪನೆಯೆಂದು ಭಾವಿಸಲಾಗಿದೆ. ಪ್ರಜಾತಂತ್ರ ಮೂಲತಃ, ಜನರಿಂದಲೇ ನಿರ್ವಹಿಸಲ್ಪಡುವ ವಿದ್ಯಮಾನವಾಗಿರುವುದರಿಂದ ಅವರ ಸಂಯಮದ ಹಾಗೂ ಸಕ್ರಿಯ ಭಾಗವಹಿಸುವಿಕೆಯನ್ನು ಅದರ ಮೂರನೇಯ ಪ್ರಮುಖ ಪರಿಕಲ್ಪನೆ ಎಂದು ಭಾವಿಸಲಾಗಿದೆ.

ಕೊನೆಯದಾಗಿ, ಇಂದು ನಮ್ಮನ್ನು ಒಳಗೊಳ್ಳುವ ಪ್ರಜಾತಾಂತ್ರಿಕ ವ್ಯವಸ್ಥೆ ಪ್ರತಿನಿಧಿತ್ವ ಅಥವಾ ಪ್ರಾತಿನಿಧಿಕತೆ ಎನ್ನುವ ಅತ್ಯಂತ ಪ್ರಮುಖ ಕಲ್ಪನೆಯ ಮೇಲೆ ನಿಂತಿದೆ. ಇಂದಿನ ನಮ್ಮ ಬದುಕಿನ ಸಾಂಸ್ಕೃತಿಕ ಸಂಕೀರ್ಣತೆಗಳು, ಸಾಮಾಜಿಕ ಬಹುರೂಪತೆಗಳು ಹಾಗೂ ರಾಜಕೀಯ ತೊಡಕುಗಳು ನಮ್ಮ ಪ್ರಜಾತಂತ್ರವನ್ನು ಅನಿವಾರ್ಯವಾಗಿ ಪ್ರಾತಿನಿಧಿಕತೆಯನ್ನು ಅವಲಂಬಿಸುವಂತೆ ಮಾಡಿದೆ. ಪ್ರಾತಿನಿಧ್ಯ ಅತ್ಯಂತ ಸಂಕೀರ್ಣವಾದ ಮತ್ತು ಕ್ಲಿಷ್ಟವಾದ ವಿದ್ಯಮಾನವಾಗಿರುವುದರಿಂದ ಅದನ್ನು ಆಧರಿಸಿದ ಪ್ರಜಾತಂತ್ರವು ಸಂಕೀರ್ಣವಾಗಿ ಕಾಣಿಸುತ್ತದೆ. ಹೀಗೆ ಪ್ರಾತಿನಿಧ್ಯದ ಕುರಿತಾದ ತಾತ್ತ್ವಿಕ ವಿಚಾರಗಳು ಪ್ರಜಾತಂತ್ರದ ಅವಿನಾಭಾಗವಾಗಿ ಕಾಣಿಸುತ್ತವೆ. ಈ ನಾಲ್ಕು ಪರಿಕಲ್ಪನೆಗಳು ಪರಸ್ಪರ ಸಮತೂಕದ ಸಂಯೋಜನೆಯಲ್ಲಿ ಕಾರ್ಯಪ್ರವೃತ್ತವಾದಾಗ ಪ್ರಜಾತಂತ್ರ ಯಶಸ್ವಿ ಅಥವಾ ಯಥಾರ್ಥ ಎಂದೆನಿಸಿಕೊಳ್ಳುತ್ತದೆ.

ಈ ಅಧ್ಯಯನದ ಸ್ವರೂಪ ಮತ್ತು ವ್ಯಾಪ್ತಿಗೆ ಅತಿ ಪ್ರಮುಖವಾದ ಪ್ರಜಾತಂತ್ರದ ಮೂರನೆಯ ಚರಿತ್ರೆಯ ಕುರಿತು ಕೆಲವು ಮಾತುಗಳನ್ನು ಇಲ್ಲಿ ಹೇಳಲೇಬೇಕಾಗಿದೆ. ಅದನ್ನು ವಸಾಹತುಶಾಹಿ ಸಂದರ್ಭದ ಪ್ರಜಾತಂತ್ರದ ಇತಿಹಾಸ ಎಂದು ಗುರುತಿಸಬಹುದು. ಯುರೋಪಿನ ಸಾಂಸ್ಕೃತಿಕ ಅಧಿಪತ್ಯವನ್ನು ಪ್ರತಿನಿಧಿಸುವ ವಸಾಹತುಶಾಹಿ ಕಾಲಘಟ್ಟದಲ್ಲಿ ಭಾರತವೂ ಒಳಗೊಂಡಂತೆ ಅನೇಕ ವಸಾಹತು ಸಮಾಜಗಳು ಸ್ವಾತಂತ್ರ್ಯ

ಹೋರಾಟಗಳ ಮೂಲಕ ಅಥವಾ ರಾಷ್ಟ್ರ ವಿಮೋಚನಾ ಹೋರಾಟಗಳ ಮೂಲಕ ಗಳಿಸಿಕೊಂಡ ಪ್ರಜಾತಂತ್ರದ ಮಾದರಿಗಳು ಮತ್ತು ಸಂಕಥನಗಳು ಪ್ರಜಾತಂತ್ರದ ಐರೋಪ್ಯ ಚರಿತ್ರೆಯಷ್ಟೇ ಸಂಕೀರ್ಣವಾದದ್ದು ಮತ್ತು ಈ ಸಂಕೀರ್ಣತೆಯ ಅರಿವಿನಲ್ಲಿಯೇ ಪ್ರಸ್ತುತ ಅಧ್ಯಯನ ಭಾರತದ ಸಮಾಜವಾದಿಗಳು ಎಂದು ಕರೆಯಲ್ಪಡುವ ಚಿಂತಕರ ಪ್ರಜಾತಂತ್ರದ ಸಂಕಥನಗಳನ್ನು, ಪ್ರಯತ್ನಗಳನ್ನು ಮತ್ತು ನಡುಪ್ರವೇಶಗಳನ್ನು ಪರಿಶೀಲಿಸಿದೆ.

ಈ ದಿಸೆಯಲ್ಲಿ ಪ್ರಜಾತಂತ್ರದ ಕುರಿತ ಪ್ರಸ್ತುತ ಅಧ್ಯಯನದ ತಾತ್ತ್ವಿಕ ಚೌಕಟ್ಟಿಗೆ ಪ್ರಮುಖವಾಗುವ ಕೆಲವು ಅಂಶಗಳನ್ನು ನಮೂದಿಸಬೇಕಾಗಿದೆ. ಮೊದಲನೆಯದಾಗಿ, ಭಾರತದ ಪ್ರಜಾತಂತ್ರವೆನ್ನುವ ತಾತ್ತ್ವಿಕ ವಿದ್ಯಮಾನ ಐರೋಪ್ಯ ಪ್ರಜಾತಂತ್ರದ ನಕಲು ಪ್ರತಿಯಲ್ಲ ಎಂದು ಈ ಅಧ್ಯಯನ ತಿಳಿಯುತ್ತದೆ. ತತ್ತ್ವಜ್ಞಾನೀಯವಾಗಿ ಪ್ರಜಾತಂತ್ರ ಒಂದು ತೆರೆದ ಅಂಚಿನ ಸೈದ್ಧಾಂತಿಕ ವಿದ್ಯಮಾನವಾಗಿರುವುದರಿಂದ ಅದು ಬೇರೆ ಬೇರೆ ಸಮಾಜಗಳಲ್ಲಿ ಆಯಾ ಸಮಾಜಗಳ ಸಾಂಸ್ಕೃತಿಕ ಸನ್ನಿವೇಶಕ್ಕೆ ಅನುಗುಣವಾಗಿ ತನ್ನ ರೂಪ ಪರಿವರ್ತನೆಯನ್ನು ಮಾಡಿದೆ. ಆದ್ದರಿಂದ, ಭಾರತದ ಪ್ರಜಾತಂತ್ರ ಭಾರತದ ವಿಶಿಷ್ಟ ಸಾಂಸ್ಕೃತಿಕ ಸಂದರ್ಭದಲ್ಲಿ ರೂಪುಗೊಂಡ ಭಾರತೀಯ ಪ್ರಜಾತಂತ್ರ. ಈ ಅರ್ಥದಲ್ಲಿ ಭಾರತದ ಪ್ರಜಾತಂತ್ರದ ಇತಿಹಾಸವು ಐರೋಪ್ಯ ಪ್ರಜಾತಂತ್ರದ ಚರಿತ್ರೆಯ ಮರುಪ್ರದರ್ಶನವಲ್ಲ. ಅದು ಆಧುನಿಕ ಭಾರತದ ಚರಿತ್ರೆಯ ವಿವಿಧ ಕಾಲಘಟ್ಟಗಳಲ್ಲಿ, ವಿಭಿನ್ನ ಪ್ರಕ್ರಿಯೆಗಳಲ್ಲಿ ಮತ್ತು ಅನೇಕ ಬಗೆಯ ಒತ್ತಡಗಳಲ್ಲಿ ಸಾಗಿಕೊಂಡು ಬಂದ ವಿದ್ಯಮಾನ. ಅದರ ತಾತ್ತ್ವಿಕತೆಯಲ್ಲಿ ಹಾಗೂ ಕ್ರಿಯಾಚರಣೆಯಲ್ಲಿ ಭಾರತದ ಚರಿತ್ರೆಯ ನಿರ್ದಿಷ್ಟವಾದ ಹಾಗೂ ಸಂಸ್ಕೃತಿಗೆ ವಿಶಿಷ್ಟವಾದ ಕರ್ಷಣೆಗಳಿವೆ. ಅವುಗಳ ಮೂಲಕ ಅದು ತನ್ನ ತಾತ್ತ್ವಿಕ ಹಾಗೂ ರಾಜಕೀಯ ಶರೀರವನ್ನು ಪಡೆದುಕೊಂಡಿದೆ.

ಭಾರತದ ಪ್ರಜಾತಂತ್ರದ ಈ ಚಾರಿತ್ರಿಕ ಮತ್ತು ಸಾಂಸ್ಕೃತಿಕ ನಿರ್ದಿಷ್ಟತೆಯ ಅರಿವಿನಿಂದಲೇ ಪ್ರಸುತ್ತ ಅಧ್ಯಯನ ಭಾರತದ ಪ್ರಜಾತಂತ್ರವನ್ನು ಮತ್ತು ಅದರ ಗರ್ಭದಿಂದಲೇ ಹೊರಬಂದ ಭಾರತದ ಸಮಾಜವಾದವನ್ನು ಪರಿಶೀಲಿಸಲು ಯತ್ನಿಸುತ್ತದೆ. ಭಾರತದ ಸ್ವಾತಂತ್ರ್ಯ ಹೋರಾಟದ ನಿರ್ದಿಷ್ಟ ಕಾಲಘಟ್ಟದಲ್ಲಿ ರೂಪು ತಳೆದ ಭಾರತದ ಸಮಾಜವಾದಿ ಚಿಂತನೆ, ಸ್ವಾತಂತ್ರ್ಯೋತ್ತರ ಕಾಲಘಟ್ಟದಲ್ಲಿ ಪ್ರಜಾತಂತ್ರದ ಕಲ್ಪನೆಯನ್ನು ಸೈದ್ಧಾಂತಿಕವಾಗಿ ನಿಖರಗೊಳಿಸಿದ ಮತ್ತು ರಾಜಕೀಯವಾಗಿ ಪ್ರಖರಗೊಳಿಸಿದ ವಿದ್ಯಮಾನ. ಸ್ವಾತಂತ್ರ್ಯ, ಸಮಾನತೆ ಮತ್ತು ಸಾಮಾಜಿಕ ನ್ಯಾಯಗಳ ಆಧಾರದಲ್ಲಿ ಭಾರತೀಯ ಪ್ರಜಾತಂತ್ರವನ್ನು ಪರಿಕಲ್ಪಿಸಿದ ಈ ಸಮಾಜವಾದಿ ರಾಜಕಾರಣದ ನಾಯಕತ್ವವನ್ನು ಅದರ ಪ್ರಜಾತಾಂತ್ರಿಕ ಕಾಳಜಿಗಳ ಕಾರಣಕ್ಕಾಗಿಯೇ ಪ್ರಜಾತಾಂತ್ರಿಕ ಸಮಾಜವಾದವೆಂದು ಬಣ್ಣಿಸಬಹುದು. ಹಾಗಾಗಿ, ಭಾರತೀಯ ಸಮಾಜವಾದದ ಪ್ರಜಾತಾಂತ್ರಿಕ ಆಶಯಗಳು ಮತ್ತು ಪ್ರಯತ್ನಗಳು ಈ ಅಧ್ಯಯನದ ಪ್ರಮುಖ ನೆಲೆ.

19ನೇ ಶತಮಾನದ ಸಮಾಜ ಸುಧಾರಣಾ ಪ್ರಯತ್ನಗಳಿಂದ ಹಿಡಿದು, 20ನೇ ಶತಮಾನದ ಸ್ವಾತಂತ್ರ್ಯ ಹೋರಾಟ, ಸಂವಿಧಾನ ರಚನೆ ಮತ್ತು ಸ್ವಾತಂತ್ರ್ಯೋತ್ತರ ಭಾರತದ ರಾಜಕಾರಣದ ವಿಸ್ತೃತ ನೋಟದಲ್ಲಿ ಈ ಅಧ್ಯಯನ ಭಾರತದ ಸಮಾಜವಾದಿಗಳು ನಡೆಸಿದ ಪ್ರಜಾತಾಂತ್ರಿಕ ರಾಜಕೀಯ ನಡುಪ್ರವೇಶದ ಸ್ವರೂಪ ಮತ್ತು ಪರಿಣಾಮಗಳನ್ನು ವಿಮರ್ಶಾತ್ಮಕವಾಗಿ ಪರಿಶೀಲಿಸಿದೆ. ತನ್ನ ಸ್ವರೂಪದಲ್ಲಿ ಅತ್ಯಂತ ವಿಸ್ತೃತವೂ ಮತ್ತು ಸಂಕೀರ್ಣವೂ ಆಗಿರುವ ಭಾರತದ ಪ್ರಜಾತಂತ್ರದ ಚರಿತ್ರೆಯಲ್ಲಿ ಸಮಾಜವಾದಿಗಳ ನಡುಪ್ರವೇಶವನ್ನು ಚರ್ಚಿಸುವುದು ಕ್ಲಿಷ್ಟವಾದ ಕೆಲಸವೆನ್ನುವ ಅರಿವಿನಲ್ಲಿ, ಈ ಅಧ್ಯಯನ ಏಕಕಾಲದಲ್ಲಿ ಪ್ರಜಾತಂತ್ರ ಮತ್ತು ಸಮಾಜವಾದ ಎನ್ನುವ ಎರಡು ಗಹನವಾದ ತಾತ್ತ್ವಿಕ ವಿದ್ಯಮಾನಗಳನ್ನು ಅವುಗಳ ಭಾರತೀಯ ಅವತರಣಿಕೆಗಳಲ್ಲಿ ಪರಿಶೀಲಿಸುವ ಮತ್ತು ಅವುಗಳ ನಡುವಿನ ಸಹ ಸಂಬಂಧವನ್ನು ಗುರುತಿಸುವ ಕೆಲಸವನ್ನು ಮಾಡಲು ಯತ್ನಿಸಿದೆ. ಹಾಗಾಗಿ, ಅಧ್ಯಯನದ ಹಿತದಷ್ಟಿಯಿಂದ ಕೆಲವು ಅನುಕೂಲಕರ ಚೌಕಟ್ಟುಗಳನ್ನು ಹಾಗೂ ಇತಿಮಿತಿಗಳನ್ನು ಉದ್ದೇಶಪೂರ್ವಕವಾಗಿ ನಿಗದಿಪಡಿಸಿಕೊಳ್ಳಬೇಕಾಗುತ್ತದೆ. ಹೀಗಾಗಿ,

ಪ್ರಸ್ತುತ ಅಧ್ಯಯನ ಪ್ರಜಾತಂತ್ರದ ಒಂದು ಸಂಕ್ಷಿಪ್ತವಾದ ಜಾಗತಿಕ ನೋಟದ ಚೌಕಟ್ಟಿನಲ್ಲಿ ಭಾರತೀಯ ಪ್ರಜಾತಂತ್ರದ ರೂಪು ರೇಷೆಗಳನ್ನು ಚಾರಿತ್ರಿಕವಾಗಿ ಮತ್ತು ತಾತ್ತ್ವಿಕವಾಗಿ ವಿಷದಪಡಿಸಿದೆ. ಅಂತೆಯೇ, ಭಾರತದ ಪ್ರಜಾತಂತ್ರದ ಚರಿತ್ರೆ ಮತ್ತು ಸಂಕಥನಗಳ ಹಿನ್ನಲೆಯಲ್ಲಿ ಭಾರತೀಯ ಸಮಾಜವಾದಿ ಚಿಂತನೆಯ ಒಂದು ಸ್ಥೂಲ ನಿರೂಪಣೆಯನ್ನು ಮತ್ತು ಈ ನಿರೂಪಣೆಯ ಆಧಾರದಲ್ಲಿ ಭಾರತದ ಪ್ರಜಾತಾಂತ್ರಿಕ ಸಮಾಜವಾದದ ಅಥವಾ ಸಮಾಜವಾದಿ ಪ್ರಜಾತಂತ್ರದ ಮೂವರು ಪ್ರಮುಖ ಚಿಂತಕರುಗಳೆಂದು ಗುರುತಿಸಲಾದ ರಾಮಮನೋಹರ ಲೋಹಿಯಾ, ಜಯಪ್ರಕಾಶ್ ನಾರಾಯಣ್ ಮತ್ತು ಆಚಾರ್ಯ ನರೇಂದ್ರದೇವರವರ ಪ್ರಜಾತಾಂತ್ರಿಕ ಯಾ ಸಮಾಜವಾದಿ ಕಾಳಜಿಗಳನ್ನು, ಚಿಂತನೆಗಳನ್ನು ಹಾಗೂ ಪರಿಶ್ರಮಗಳನ್ನು ದಾಖಲಿಸುವ ಮತ್ತು ವಿಶ್ಲೇಷಿಸುವ ಕೆಲಸವನ್ನು ಈ ಅಧ್ಯಯನ ಮಾಡಿದೆ.

ಅಧ್ಯಯನದ ಸ್ವರೂಪ ಮತ್ತು ವ್ಯಾಪ್ತಿ:

ಈ ಅಧ್ಯಯನದ ಸ್ವರೂಪ ಮತ್ತು ವ್ಯಾಪ್ತಿಗೆ ಸಂಬಂಧಿಸಿದ ಕೆಲವು ಅಂಶಗಳನ್ನು ಸ್ಪಷ್ಟಪಡಿಸಬೇಕಾಗಿದೆ. ಈ ಅಧ್ಯಯನ ಭಾರತದ ಪ್ರಜಾತಂತ್ರದ ಅಥವಾ ಭಾರತೀಯ ಸಮಾಜವಾದಿ ಚಿಂತನೆಯ ಸಮಗ್ರವಾದ ನಿರೂಪಣೆಯಲ್ಲ. ಅದು ಸಾಕಷ್ಟು ಸಂಕೀರ್ಣವಾದ ಭಾರತದ ಪ್ರಜಾತಂತ್ರದ ಚರಿತ್ರೆಯ ಪೂರ್ಣ ವಿವರಗಳನ್ನು ದಾಖಲಿಸುವುದಿಲ್ಲ ಅಥವಾ ಭಾರತದ ಪ್ರಜಾತಂತ್ರದ ವಿವಿಧ ಕಾಲಘಟ್ಟದ ಚಾರಿತ್ರಿಕ ಅಧ್ಯಯನವನ್ನೂ ಇದು ನಡೆಸುವುದಿಲ್ಲ. ಬದಲಾಗಿ, ಪ್ರಸ್ತುತ ಅಧ್ಯಯನ ಜಗತ್ತಿನಾದ್ಯಂತ ನಡೆಯುತ್ತಿರುವ ಪ್ರಜಾತಂತ್ರದ ಕುರಿತಾದ ಪ್ರಸಕ್ತ ವಾಗ್ವಾದದ ಅರಿವಿನಲ್ಲಿ ಭಾರತೀಯ ಪ್ರಜಾತಂತ್ರದ ತಾತ್ತ್ವಿಕ ರಾಜಕಾರಣದ ಕುರಿತು ಒಂದು ವಿಮರ್ಶಾ ನೋಟವನ್ನು ಮುಂದಿಡುತ್ತದೆ ಮತ್ತು ಈ ನೋಟದ ಬೆಳಕಿನಲ್ಲಿ ಭಾರತೀಯ ಸಮಾಜವಾದಿ ರಾಜಕಾರಣದಲ್ಲಿ ಅಡಕವಾಗಿರುವ ಪ್ರಜಾತಾಂತ್ರಿಕ ಕಾಳಜಿಗಳನ್ನು ಗುರುತಿಸುತ್ತದೆ. ಅಂತೆಯೇ, ಈ ಪ್ರಜಾತಾಂತ್ರಿಕ ಕಾಳಜಿಗಳು ಹೇಗೆ ಭಾರತೀಯ ಸಮಾಜವಾದಿ ಚಿಂತನೆಯ

ಕಾರಣಾದಿಂದಾಗಿ ಭಾರತದ ರಾಜಕಾರಣದ ಮುನ್ನೆಲೆಗೆ ಬಂದವು ಎಂದು ತೋರಿಸಿಕೊಡಲು ಯತ್ನಿಸಿದೆ. ಈ ಪ್ರಯತ್ನದ ಭಾಗವಾಗಿ ಪ್ರಸ್ತುತ ಅಧ್ಯಯನ ಭಾರತೀಯ ಸಮಾಜವಾದಿ ಚಿಂತನೆಯ ಒಂದು ಸಂಕ್ಷಿಪ್ತ ಚಾರಿತ್ರಿಕ ನೋಟವನ್ನು ನೀಡುತ್ತದೆ. ಈ ಅರ್ಥದಲ್ಲಿ ಪ್ರಸ್ತುತ ಅಧ್ಯಯನ ಭಾರತೀಯ ಪ್ರಜಾತಂತ್ರದ ಒಂದು ವಿಶ್ಲೇಷಣೆಯೂ ಹೌದು. ಅಂತೆಯೇ, ಅದು ಭಾರತೀಯ ಸಮಾಜವಾದಿ ಚಿಂತನೆಯ ಒಂದು ವಿಮರ್ಶೆಯೂ ಹೌದು.

ಪ್ರಸ್ತುತ ಅಧ್ಯಯನ, ಭಾರತೀಯ ಸಮಾಜವಾದಿ ಚರಿತ್ರೆಯ ಮೂರು ಪ್ರಮುಖ ಚಿಂತಕರ ವಿಚಾರಗಳ ಬೆಳಕಿನಲ್ಲಿ ಭಾರತೀಯ ಸಮಾಜವಾದದ ಪ್ರಜಾತಾಂತ್ರಿಕ ಅನುಸಂಧಾನದ ತಾತ್ತ್ವಿಕ ನೆಲೆಗಳನ್ನು ಹಾಗೂ ರಾಜಕೀಯ ಸ್ವರೂಪವನ್ನು ವಿಮರ್ಶೆಗೆ ಒಡ್ಡುತ್ತದೆ. ಭಾರತದ ಸಮಾಜವಾದಿ ಆಂದೋಲನದ ಅನೇಕಾನೇಕ ನಾಯಕರುಗಳ ನಡುವೆ, ಮೇಲೆ ಸೂಚಿಸಿದ ಮೂರು ಚಿಂತಕರನ್ನು ಸಂಶೋಧನೆಗೆ ಆಯ್ಕೆ ಮಾಡಿರುವುದಕ್ಕೆ ಕೆಲವು ನಿರ್ದಿಷ್ಟ ಮತ್ತು ವಿಭಿನ್ನ ಕಾರಣಗಳಿವೆ. ಪ್ರಮುಖವಾಗಿ, ಈ ಮೂರು ಚಿಂತಕರು ಭಾರತೀಯ ಸಮಾಜವಾದದ ಅತ್ಯುತ್ತಮ ಅಭಿವ್ಯಕ್ತಿಗಳೆಂದು ಅನೇಕ ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಅಷ್ಟು ಮಾತ್ರವಲ್ಲದೇ, ಈ ಮೂರೂ ಮಂದಿ ತಮ್ಮದೇ ವಿಶಿಷ್ಟ ರೀತಿಗಳಲ್ಲಿ ಭಾರತದ ಪ್ರಜಾತಂತ್ರದ ಒಡನಾಡಿಗಳಾಗಿದ್ದಾರೆ ಮತ್ತು ಭಾರತೀಯ ಪ್ರಜಾತಂತ್ರದ ಚರಿತ್ರೆಯಲ್ಲಿ ವಿಶಿಷ್ಟ ಸ್ಥಾನಗಳನ್ನು ಪಡೆದುಕೊಳ್ಳುತ್ತಾರೆ. ಉದಾಹರಣೆಗೆ, ರಾಮಮನೋಹರ ಲೋಹಿಯಾ ಭಾರತದ ಪ್ರಜಾತಾಂತ್ರಿಕ ತಾತ್ತ್ವಿಕತೆಯ ಪ್ರಥಮಶ್ರೇಣಿಯ ತತ್ತ್ವಜ್ಞಾನಿ. ಪ್ರಜಾತಂತ್ರದ ಕುರಿತು ತನ್ನದೇ ಆದ ವಿಶಿಷ್ಟ ಶೈಲಿಯಲ್ಲಿ ಚಿಂತನೆ

ನಡೆಸಿದ ಲೋಹಿಯಾ, ಭಾರತೀಯ ಪ್ರಜಾತಂತ್ರದ ತಾತ್ತ್ವಿಕ ಚರಿತ್ರೆಯಲ್ಲಿ ತಮ್ಮ ಕೊಡುಗೆಗಳಿಂದಾಗಿ ಚಿರಸ್ಥಾಯಿಯಾಗಿದ್ದಾರೆ.[5]

ಜಯಪ್ರಕಾಶ್ ನಾರಾಯಣ್ ಸ್ವಾತಂತ್ರ್ಯೋತ್ತರ ಭಾರತದ ರಾಜಕಾರಣದ ಮೂರನೆಯ ದಶಕದಲ್ಲಿ ತಮ್ಮ ಸಮಗ್ರ ಕ್ರಾಂತಿ ಎನ್ನುವ ಪ್ರಜಾತಾಂತ್ರಿಕ ಕಾರ್ಯ ಸೂಚಿಯಿಂದಾಗಿ ಭಾರತದ ಪ್ರಜಾತಂತ್ರದ ಅವಿಸ್ಮರಣೀಯ ಅಧ್ಯಾಯವಾಗಿ ಕಾಣಿಸುತ್ತಾರೆ. ತಾತ್ತ್ವಿಕವಾಗಿ ಭಾರತದ ಪ್ರಜಾತಂತ್ರಕ್ಕೆ ಜೆ.ಪಿ ಕೊಡುಗೆ ಲೋಹಿಯಾರಷ್ಟೇ ಪ್ರಖರವಲ್ಲವಾದರೂ ಭಾರತದ ಪ್ರಜಾತಾಂತ್ರಿಕ ರಾಜಕಾರಣದ ಇತಿಹಾಸದಲ್ಲಿ ಅವರು ಲೋಹಿಯಾರಿಗಿಂತಲೂ ಹೆಚ್ಚು ಪ್ರಮುಖರೆನಿಸಿಕೊಳ್ಳುತ್ತಾರೆ.[6]

ಆಚಾರ್ಯ ನರೇಂದ್ರದೇವ ಒಂದು ವಿಶಿಷ್ಟ ಬಗೆಯ ಮಾರ್ಕ್ಸ್‌ವಾದಿ ಚಿಂತನೆಯ ಚೌಕಟ್ಟಿನಲ್ಲಿ ಪ್ರಜಾತಂತ್ರದ ಪ್ರಮುಖ ಸೂತ್ರಗಳನ್ನು ಮರುನಿರ್ವಚಿಸುವ ಪ್ರಯತ್ನವನ್ನು ನಡೆಸಿದ್ದಾರೆ.[7] ಸ್ವಾತಂತ್ರ್ಯೋತ್ತರ ಭಾರತದ ರಾಜಕಾರಣದಲ್ಲಿ ತಮ್ಮ ಅಕಾಲ ಮರಣದಿಂದಾಗಿ ವಿಶೇಷ ಪ್ರಭಾವವನ್ನು ಅವರು ಬೀರಿರಲಿಲ್ಲವಾದರೂ ಮಾರ್ಕ್ಸ್‌ವಾದಿ ತಾತ್ತ್ವಿಕತೆ ಮತ್ತು ಪ್ರಜಾತಾಂತ್ರಿಕ ರಾಜಕಾರಣಗಳ ಒಂದು ವಿಶಿಷ್ಟ ಸಂಯೋಜನೆಯಾಗಿ ನರೇಂದ್ರದೇವ ನಮಗೆ ಮುಖ್ಯವಾಗುತ್ತಾರೆ.

---

[5] Kapoor, Mastram. (ed) "Collected works of Dr. Rammanohar Lohia Volume 9", New Delhi: Anamika Publishers & Distributor Pvt. Ltd, 2011

[6] Prasad, Bimal (ed). "Jayaprakash Narayan Collected Works Vol. 2(1936-1939)", New Delhi: Manohar Publishers & Distributors, 2002

[7] Sharma, Hari Dev. "Selected works of Acharya Narendra Deva: 1941-1948". Hyderbad: Radiant Publishers, 1998

ಮೇಲೆ ಸೂಚಿಸಿದ ಕಾರಣಗಳಿಗಾಗಿ ಪ್ರಸ್ತುತ ಅಧ್ಯಯನ ಲೋಹಿಯಾ, ಜಯಪ್ರಕಾಶ್ ನಾರಾಯಣ್ ಮತ್ತು ನರೇಂದ್ರದೇವರ ವಿಚಾರಗಳನ್ನು ಕೇಂದ್ರೀಕರಿಸಿಕೊಂಡು ಭಾರತದ ಪ್ರಜಾತಂತ್ರದ ಸಮಾಜವಾದಿ ಮರುನಿರ್ವಚನವನ್ನು ವಿಮರ್ಶಾತ್ಮಕವಾಗಿ ಮುಂದಿಡುವ ಪ್ರಯತ್ನವನ್ನು ಮಾಡಿದೆ.

ಅಧ್ಯಯನದ ಉದ್ದೇಶಗಳು:

ಪ್ರಸ್ತುತ ಅಧ್ಯಯನ ಈ ಕೆಳಗಿನ ಉದ್ದೇಶಗಳನ್ನು ನಿರ್ವಹಿಸಲು ಯತ್ನಿಸಿದೆ:

1. ಭಾರತದ ಪ್ರಜಾತಾಂತ್ರಿಕ ಸಂಕಥನದ ಸಮಕ್ಷಮದಲ್ಲಿ ಸಮಾಜವಾದಿ ಚಿಂತನೆ ಮತ್ತು ರಾಜಕಾರಣವನ್ನು ವಿಮರ್ಶಾತ್ಮಕವಾಗಿ ಮಂಡಿಸುವುದು.

2. ಭಾರತದ ಪ್ರಜಾತಾಂತ್ರಿಕ ತಾತ್ತ್ವಿಕತೆಯನ್ನು ಸಮಾಜವಾದಿ ರಾಜಕಾರಣ ಹೇಗೆ ಮೂಲಜಿಜ್ಞಾಸಿಕವಾಗಿ ಪರಿಶೀಲಿಸಿದೆ ಮತ್ತು ಅದನ್ನು ಪ್ರಖರಗೊಳಿಸಲು ಯತ್ನಿಸಿದೆ ಎನ್ನುವುದು ಪರಿಶೀಲಿಸುವುದು.

3. ಭಾರತದ ಪ್ರಜಾತಂತ್ರದ ವಿಕಾಸದಲ್ಲಿ ಸಮಾಜವಾದಿಗಳ ನಿರ್ದಿಷ್ಟ ಕೊಡುಗೆಗಳನ್ನು ಪರಿಶೀಲಿಸುವುದು.

4. ಭಾರತೀಯ ಪ್ರಜಾತಂತ್ರದ ಸಾಮಾಜಿಕ ತಳಹದಿಯನ್ನು ವಿಸ್ತಾರಗೊಳಿಸುವಲ್ಲಿ ಸಮಾಜವಾದಿಗಳ ಪರಿಶ್ರಮವನ್ನು ಗುರುತಿಸುವುದು.

5. ಭಾರತದ ಸಮಾಜವಾದಿಗಳ ನಡುಪ್ರವೇಶದಿಂದಾಗಿ ಹೇಗೆ ಪ್ರಜಾತಂತ್ರ ಭಾರತದಲ್ಲಿ ಕಾಂತ್ರಿಕಾರಕಗೊಂಡಿತು ಎನ್ನುವುದನ್ನು ಗುರುತಿಸುವುದು.

ಸಂಶೋಧನಾ ಪ್ರಮೇಯಗಳು:

ಪ್ರಸ್ತುತ ಅಧ್ಯಯನ ಈ ಕೆಳಗಿನ ಪ್ರಮೇಯಗಳ ಹಿನ್ನೆಲೆಯಲ್ಲಿ ತನ್ನ ಸಂಶೋಧನೆಯನ್ನು ನಿರ್ವಹಿಸಿದೆ ಮತ್ತು ಅವುಗಳನ್ನು ಪುಷ್ಟೀಕರಿಸುವ ನೆಲೆಯಲ್ಲಿ ಪರಿಶ್ರಮ ವಹಿಸಿದೆ. ಅವುಗಳನ್ನು ಹೀಗೆ ಮುಂದಿಡಬಹುದು:

1. ಭಾರತದ ಸಮಾಜವಾದಿ ಚಿಂತನೆ ಮತ್ತು ರಾಜಕಾರಣ ಭಾರತದ ಪ್ರಜಾತಂತ್ರದ ತಾತ್ತ್ವಿಕ ರೂಪುರೇಷೆಗಳನ್ನು ನಿರ್ಣಾಯಕವಾಗಿ ಪುನರ್ ನಿರ್ವಚಿಸಲು ಯತ್ನಿಸಿದೆ.
2. ಭಾರತದ ಸಮಾಜವಾದಿ ರಾಜಕಾರಣ ಪ್ರಜಾತಂತ್ರವನ್ನು ಭಾರತದಲ್ಲಿ ಮೂಲಜಿಜ್ಞಾಸಿಕವನ್ನಾಗಿಸಿ ಅದನ್ನು ಸಮಾನತಾವಾದಿ ಪ್ರಜಾತಂತ್ರವನ್ನಾಗಿ ಪರಿವರ್ತಿಸಲು ಯತ್ನಿಸಿತು.
3. ಭಾರತದ ಪ್ರಜಾತಂತ್ರವನ್ನು ನಾಗರಿಕ ಸಮಾಜಕ್ಕೆ ಜವಬ್ದಾರನನ್ನಾಗಿಸುವ ಪ್ರಯತ್ನವನ್ನು ಭಾರತದ ಸಮಾಜವಾದಿ ನಾಯಕತ್ವ ಮಾಡಿದೆ. ಅಂತೆಯೇ, ಅದಕ್ಕೆ ಸತ್ಯಾಗ್ರಹದ ಹೊಸ ಮೊನಚನ್ನು ಕೊಡಲು ಅದು ಯತ್ನಿಸಿದೆ.
4. ಭಾರತದ ಪ್ರಜಾತಂತ್ರವನ್ನು ಸಾಮಾಜಿಕವಾಗಿ ವಿಸ್ತರಿಸುವ ಮತ್ತು ಅದನ್ನು ಭಾಗವಹಿಸುವಿಕೆಯ ಪ್ರಜಾತಂತ್ರವನ್ನಾಗಿ ಪರಿವರ್ತಿಸುವ ಮಹತ್ವದ ಕೆಲಸವನ್ನು ಭಾರತದ ಸಮಾಜವಾದ ನಿರ್ವಹಿಸಿದೆ.

ಸಂಶೋಧನಾ ಪ್ರಶ್ನೆಗಳು:

ಪ್ರಸ್ತುತ ಅಧ್ಯಯನ ಮೇಲೆ ಸೂಚಿಸಿದ ಪ್ರಮೇಯಗಳ ಬೆಳಕಿನಲ್ಲಿ ಈ ಕೆಳಗಿನ ಸಂಶೋಧನಾ ಪ್ರಶ್ನೆಗಳನ್ನು ಎದುರಿಸುವ ಪ್ರಯತ್ನವನ್ನು ಮಾಡಿದೆ.

1. ಭಾರತದ ಪ್ರಜಾತಂತ್ರವನ್ನು ತಾತ್ತ್ವಿಕವಾಗಿ ಶ್ರೀಮಂತಗೊಳಿಸುವಲ್ಲಿ ಸಮಾಜವಾದಿಗಳ ಕಾಣಿಕೆಗಳೇನು?

2. ಭಾರತದ ಪ್ರಜಾತಂತ್ರದ ರಾಜಕಾರಣವನ್ನು ಪ್ರಜಾತಾಂತ್ರಿಕಗೊಳಿಸುವಲ್ಲಿ ಸಮಾಜವಾದಿಗಳ ಕೊಡುಗೆಗಳೇನು?
3. ಸಮಾಜವಾದಿಗಳ ನಡುಪ್ರವೇಶಗಳಿಂದಾಗಿ ಭಾರತದ ಪ್ರಜಾತಂತ್ರದ ಸ್ವರೂಪದ ಮರುನಿರ್ವಚನದ ದಿಕ್ಕುದಿಸೆಗಳಾವುವು?

ಸಂಶೋಧನಾ ವಿಧಾನ:

ಭಾರತದ ಸಮಾಜವಾದದ ಪ್ರಜಾತಾಂತ್ರಿಕ ಕಾಳಜಿಗಳ ಕುರಿತಾದ ಈ ಅಧ್ಯಯನ ಮೂಲತಃ ಪರಿಕಲ್ಪನಾತ್ಮಕವಾದದ್ದಾಗಿದೆ. ಅಂತೆಯೇ, ಇದು ಬೌದ್ಧಿಕ ಚರಿತ್ರೆಯ ಪರಿಶೀಲನೆಯಿಂದ ರೂಪುಗೊಂಡ ತಾರ್ಕಿಕ ಊಹೆಗಳನ್ನು ಆಧಾರಿಸಿದೆ. ಹಾಗಾಗೀ, ಈ ಅಧ್ಯಯನ ಯಾವುದೇ ಬಗೆಯ ಎಂಪಿರಿಕಲ್ ವಿಧಾನದ ಅಂಶಗಳನ್ನು ತನ್ನಲ್ಲಿ ಒಳಗೊಂಡಿಲ್ಲ.

ಪ್ರಸಕ್ತ ವಿಶ್ವದಲ್ಲಿ ಪ್ರಜಾತಂತ್ರದ ತಾತ್ತ್ವಿಕ ಸ್ವರೂಪ ಹಾಗೂ ರಾಜಕಾರಣಗಳ ಕುರಿತಾಗಿ ನಡೆಯುತ್ತಿರುವ ವಾಗ್ವಾದಗಳ ಹಿನ್ನೆಲೆಯಲ್ಲಿ ಈ ಅಧ್ಯಯನ ಭಾರತೀಯ ಪ್ರಜಾತಂತ್ರದ ಕುರಿತು ಒಂದು ವಿಮರ್ಶಾತ್ಮಕವಾದ ನೋಟವನ್ನು ಒದಗಿಸಲು ಯತ್ನಿಸಿದೆ. ಅಂತೆಯೇ, ಭಾರತೀಯ ಪ್ರಜಾತಂತ್ರದ ಕುರಿತು ಒದಗಿಸಲಾದ ಈ ನಿಷ್ಕರ್ಷೆಯ ಬೆಳಕಿನಲ್ಲಿ ಭಾರತೀಯ ಸಮಾಜವಾದಿ ಚಿಂತನೆಯ ಚರಿತ್ರೆಯನ್ನು ಹಾಗೂ ಭಾರತದ ಪ್ರಜಾತಂತ್ರದ ರೂಪುಗೊಳ್ಳುವಿಕೆಯಲ್ಲಿ ಅದು ನಡೆಸಿದ ಪ್ರಯತ್ನಗಳನ್ನು ಈ ಅಧ್ಯಯನ ವಿಶ್ಲೇಷಣಾತ್ಮಕವಾಗಿ ಮುಂದಿಡುತ್ತದೆ.

ಪರಿಕಲ್ಪನಾತ್ಮಕವಾದ ಈ ಅಧ್ಯಯನದ ನಿರ್ವಹಣೆಯಲ್ಲಿ ಪ್ರಸ್ತುತ ಸಂಶೋಧನೆ ಅನೇಕ ಬಗೆಯ ತಾತ್ತ್ವಿಕ ಸಲಕರಣೆಗಳನ್ನು ಬಳಸಿಕೊಂಡಿದೆ. ಅವುಗಳಲ್ಲಿ ಮೊದಲನೆಯದು, ಪ್ರಜಾತಂತ್ರದ ಕುರಿತು ಜಾಗತಿಕವಾಗಿ ನಡೆದ ತಾತ್ತ್ವಿಕ ವಾಗ್ವಾದಗಳ ಒಂದು ಸಂಕ್ಷಿಪ್ತ ವಿಶ್ಲೇಷಣಾತ್ಮಕ ಪರಿಶೀಲನೆ. ಎರಡನೆಯದು,

ಭಾರತದ ಪ್ರಜಾತಂತ್ರದ ಚರಿತ್ರೆ, ತಾತ್ತ್ವಿಕತೆ ಹಾಗೂ ರಾಜಕಾರಣಗಳ ಕುರಿತು ನಡೆಯಲ್ಪಟ್ಟ ವಿಭಿನ್ನ ಬಗೆಯ ವಿಮರ್ಶಾ ಗ್ರಂಥಗಳ ಕ್ರೋಢೀಕರಣ ಮತ್ತು ಸಮೀಕ್ಷೆ ಹಾಗೂ ಮೂರನೆಯದಾಗಿ, ಭಾರತದ ಸಮಾಜವಾದಿ ರಾಜಕಾರಣದ ಬೌದ್ಧಿಕ ಚರಿತ್ರೆ ಮತ್ತು ಭಾರತದ ಪ್ರಜಾತಾಂತ್ರಿಕ ರಾಜಕಾರಣದಲ್ಲಿ ಅದು ತನ್ನನ್ನು ನಿರ್ವಹಿಸಿಕೊಂಡು ಬಂದ ರೀತಿಯ ಕುರಿತು ಪ್ರಕಟಿಸಲ್ಪಟ್ಟ ಪ್ರಮುಖ ಗ್ರಂಥಗಳ ವಿಮರ್ಶೆ, ಈ ಅಧ್ಯಯನದ ವಿಶ್ಲೇಷಣಾ ವಿಧಾನದ ಅವಿಭಾಜ್ಯ ಅಂಗಗಳಾಗಿವೆ. ಹಾಗಾಗೀ, ಈ ಅಧ್ಯಯನ ಅನ್ವೇಷಿಸಲು ಆಯ್ಕೆ ಮಾಡಿದ ವಿಷಯಗಳಿಗೆ ಅನುಸಾರವಾಗಿ ತನ್ನ ತಾತ್ತ್ವಿಕ ಚೌಕಟ್ಟನ್ನು ರೂಪಿಸಿಕೊಂಡಿದೆ.

ಈ ಹಿನ್ನೆಲೆಯಲ್ಲಿ ಸಂಶೋಧನೆಯ ಮೂರು ಪ್ರಮುಖ ಚಿಂತಕರುಗಳಾದ ರಾಮಮನೋಹರ ಲೋಹಿಯಾ, ಜಯಪ್ರಕಾಶ್ ನಾರಾಯಣ್ ಹಾಗೂ ಆಚಾರ್ಯ ನರೇಂದ್ರದೇವರ ಬರಹಗಳನ್ನು ಅಧ್ಯಯನದ ಪ್ರಾಥಮಿಕ ಆಕರಗಳೆಂದು ಪರಿಗಣಿಸಲಾಗಿದೆ. ಅಂತೆಯೇ, ಸಮಾಜವಾದಿ ಆಂದೋಲನದ ಅನೇಕ ಮಹತ್ವದ ದಸ್ತಾವೇಜುಗಳನ್ನು ಕೂಡ ಈ ಅಧ್ಯಯನದಲ್ಲಿ ಪ್ರಾಥಮಿಕ ಆಕರಗಳೆಂದು ಪರಿಗಣಿಸಲಾಗಿದೆ.

ಪ್ರಜಾತಂತ್ರದ ಕುರಿತಾದ ವಿಭಿನ್ನ ಬಗೆಯ ಸಂಶೋಧನಾ ಬರಹಗಳನ್ನು, ಭಾರತದ ಪ್ರಜಾತಂತ್ರದ ಕುರಿತಾದ ಪ್ರಮುಖ ವ್ಯಾಖ್ಯಾನಗಳನ್ನು ಹಾಗೂ ಭಾರತೀಯ ಸಮಾಜವಾದದ ಚರಿತ್ರೆಯ ಬಗೆಗಿನ ವಿವಿಧ ವಿಮರ್ಶಾ ಗ್ರಂಥಗಳನ್ನು ಈ ಅಧ್ಯಯನದ ಆನುಷಂಗಿಕ ಆಕರಗಳೆಂದು ಪರಿಗಣಿಸಲಾಗಿದೆ. ಒಟ್ಟು ಅರ್ಥದಲ್ಲಿ ಪ್ರಸ್ತುತ ಅಧ್ಯಯನವನ್ನು ಲಭ್ಯವಿರುವ ಪ್ರಾಥಮಿಕ ಮತ್ತು ಆನುಷಂಗಿಕ ಆಕರಗಳ ಆಧಾರದಲ್ಲಿ ನಡೆಸಲಾದ ಪಠ್ಯ ಸ್ವರೂಪದ ಸಂಶೋಧನೆ ಎಂದು ಪರಿಗಣಿಸಬಹುದು.

ಸಾಹಿತ್ಯ ಸಮೀಕ್ಷೆ:

I. ಪ್ರಾಥಮಿಕ ಆಕರಗಳು:

1. ಲೋಹಿಯಾ, ರಾಮಮನೋಹರ್. "*ಮಾರ್ಕ್ಸ್, ಗಾಂಧಿ ಮತ್ತು ಸೋಶಯಲಿಸಂ*", ನವಹಿಂದ್ ಪಬ್ಲಿಕೇಶನ್: ಹೈದರಾಬಾದ್. 1963

"ಮಾರ್ಕ್ಸ್, ಗಾಂಧಿ ಮತ್ತು ಸಮಾಜವಾದ" ಎನ್ನುವ ಶೀರ್ಷಿಕೆಯಲ್ಲಿ ಪ್ರಕಟಗೊಂಡ ಈ ಲೇಖನಗಳ ಸರಮಾಲೆ ಬಹುಮಟ್ಟಿಗೆ ಲೋಹಿಯಾ ಪ್ರತಿನಿಧಿಸಿದ ರಾಜಕೀಯ ಚಿಂತನೆಯ ರೂಪುರೇಷೆಗಳನ್ನು ಮತ್ತು ಅದರಲ್ಲಿ ಹುದುಗಿರುವ ಸಮಾನತಾವಾದಿ, ಪ್ರಜಾತಾಂತ್ರಿಕ ಕಾಳಜಿಗಳನ್ನು ಬಿಂಬಿಸುತ್ತದೆ.

ಇಲ್ಲಿ ಪ್ರಕಟಗೊಂಡ ಲೇಖನಗಳು ಬೇರೆ ಬೇರೆ ಸಂದರ್ಭಗಳಲ್ಲಿ ಬರೆಯಲ್ಪಟ್ಟದ್ದಾದರೂ ಅವುಗಳ ನಡುವೆ ಒಂದು ಸಾವಯವ ಸಂಬಂಧವಿದೆ. ಸ್ವತಃ ಲೋಹಿಯಾರವರೇ ಆಯ್ಕೆ ಮಾಡಿ ಸಂಪಾದಿಸಿ ಪ್ರಕಟಿಸಿದ್ದಾರೆ. ಅಷ್ಟು ಮಾತ್ರವಲ್ಲದೇ, ಈ ಲೇಖನ ಮಾಲಿಕೆಯ ಸಮಯ, ಸಂದರ್ಭ ಮತ್ತು ಸ್ವರೂಪದ ಕುರಿತು ಅವರೇ ಸ್ವತಃ ಸುದೀರ್ಘವಾದ ಮುನ್ನುಡಿಯನ್ನು ಬರೆದಿದ್ದಾರೆ. ಆದ್ದರಿಂದ ಈ ಕೃತಿಯನ್ನು ಅವರ ಚಿಂತನೆಯ ಪ್ರಾತಿನಿಧಿಕ ಕೃತಿಯೆಂದು ಪರಿಗಣಿಸಬಹುದು.

"ಮಾರ್ಕ್ಸ್, ಗಾಂಧಿ ಮತ್ತು ಸಮಾಜವಾದ"ದ ಎಲ್ಲ ಲೇಖನಗಳು ತಮ್ಮದೇ ಆದ ವಿಶಿಷ್ಟ ಕಾರಣಗಳಿಗಾಗಿ ಮುಖ್ಯವೆನಿಸಿಕೊಳ್ಳುತ್ತವೆಯಾದರೂ ಈ ಕೆಳಗಿನ ಲೇಖನಗಳನ್ನು ಪ್ರಸ್ತುತ ಅಧ್ಯಯನ ವಿಷಯದ ಸ್ವರೂಪಕ್ಕೆ ಸಂಬಂಧಿಸಿದಂತೆ ಮುಖ್ಯವೆಂದು ಪರಿಗಣಿಸಬಹುದು. "ಮಾರ್ಕ್ಸ್ ನಂತರದ ಅರ್ಥಶಾಸ್ತ್ರ" (Economics After Marx), "ಮಾರ್ಕ್ಸ್‌ವಾದ ಮತ್ತು ಸಮಾಜವಾದ" (Marxism and Socialism), "ಗಾಂಧಿವಾದ ಮತ್ತು ಸಮಾಜವಾದ" (Gandhism and Socialism), "ಸಾಮ್ಯವಾದದ

ಅಂತರಾಷ್ಟ್ರೀಯ ಸ್ವರೂಪ" (International Aspects of Communism), "ಸಮಾನತೆಯ ಅರ್ಥ" (Meaning of Equality) ಮತ್ತು "ಹೊಸ ಸಮೀಕರಣ" (New Integration) ಎನ್ನುವ ಲೇಖನಗಳನ್ನು ಇಲ್ಲಿ ವಿಶೇಷವಾಗಿ ಗಮನಿಸಲಾಗಿದೆ. ಮೇಲೆ ಸೂಚಿಸಲಾದ ಎಲ್ಲಾ ಲೇಖನಗಳು ಲೋಹಿಯಾರವರ ಪ್ರಜಾತಂತ್ರ ಮತ್ತು ಸಮಾಜವಾದದ ಕಲ್ಪನೆಗಳ ಬಗೆಗೆ ತಾತ್ತ್ವಿಕ ನೋಟಗಳನ್ನು ನೀಡುತ್ತವೆ. ಮಾತ್ರವಲ್ಲದೇ, ಈ ಎರಡು ಆಶಯಗಳನ್ನು ಭಾರತದ ರಾಜಕಾರಣದಲ್ಲಿ ವಾಸ್ತವಗೊಳಿಸುವ ಲೋಹಿಯಾರ ಪ್ರಯತ್ನಗಳನ್ನು ಅವು ಬಿಂಬಿಸುತ್ತವೆ. ಉದಾಹರಣೆಗೆ; "ಮಾರ್ಕ್ಸ್‌ನ ನಂತರದ ಅರ್ಥಶಾಸ್ತ್ರ" ಎನ್ನುವ ಲೇಖನ ಹೇಗೆ ಮಾರ್ಕ್ಸ್ ಬಂಡವಾಳಶಾಹಿಯನ್ನು ಅದರ ಐರೋಪ್ಯ ಆವೃತ್ತಿಯಲ್ಲಿ ಮಾತ್ರ ಗಮನಿಸುತ್ತಾನೆ ಮತ್ತು ಈ ಕಾರಣಕ್ಕಾಗಿ ಅತನ ಬಂಡವಾಳಶಾಹಿ ವ್ಯಾಖ್ಯಾನ ಅಸಮರ್ಪಕವಾದದು ಎಂದು ಪ್ರತಿಪಾದಿಸುತ್ತದೆ. ಅಂತೆಯೇ, ಮಾರ್ಕ್ಸ್‌ನ ಬಂಡವಾಳಶಾಹಿ ವ್ಯಾಖ್ಯಾನಕ್ಕೆ ಎದುರಾಗಿ ಲೋಹಿಯಾ ಈ ಲೇಖನದಲ್ಲಿ ಬಂಡವಾಳಶಾಹಿ ಮತ್ತು ಸಾಮ್ರಾಜ್ಯಶಾಹಿಗಳ ಅವಳಿ ಉಗಮದ ತತ್ತ್ವವನ್ನು ಪ್ರತಿಪಾದಿಸುತ್ತಾರೆ.

ಸಂಕಲನದ ಎರಡನೆಯ ಲೇಖನ "ಮಾರ್ಕ್ಸ್‌ವಾದ ಮತ್ತು ಸಮಾಜವಾದ" ಸಮಾಜವಾದಿ ತಾತ್ತ್ವಿಕತೆಯ ಚಾರಿತ್ರಿಕತೆ ಮತ್ತು ಸೈದ್ಧಾಂತಿಕತೆಯ ಕುರಿತು ಚರ್ಚೆಯನ್ನು ನಡೆಸುತ್ತದೆ ಮತ್ತು ಅದು ಹೇಗೆ ಮತ್ತು ಯಾಕೆ ಮಾರ್ಕ್ಸ್‌ವಾದಕ್ಕಿಂತ ಭಿನ್ನ ಎನ್ನುವುದನ್ನು ತೋರಿಸಿಕೊಡಲು ಯತ್ನಿಸುತ್ತದೆ. "ಗಾಂಧಿವಾದ ಮತ್ತು ಸಮಾಜವಾದ" ಎನ್ನುವ ಲೇಖನ ಸಮಾಜವಾದದ ತಾತ್ತ್ವಿಕತೆಯ ಮೇಲೆ ಗಾಂಧಿ ಚಿಂತನೆಯ ಪ್ರಭಾವವನ್ನು ಪರಿಶೀಲಿಸುತ್ತದೆ. "ಸಾಮ್ಯವಾದದ ಅಂತರ್ ರಾಷ್ಟ್ರೀಯ ಸ್ವರೂಪ"ದ ಕುರಿತಾದ ಲೇಖನ ಹೇಗೆ ಬಂಡವಾಳಶಾಹಿ ಮತ್ತು ಸಾಮ್ಯವಾದಗಳು ಐರೋಪ್ಯ ನಾಗರಿಕತೆಯ ಎರಡು ಮುಖಗಳು ಎನ್ನುವುದನ್ನು ತೋರಿಸಿಕೊಡಲು ಯತ್ನಿಸುತ್ತದೆ.

ಸಂಕಲನದ ಮತ್ತೊಂದು ಪ್ರಮುಖ ಲೇಖನ "ಸಮಾನತೆಯ ಅರ್ಥ" ಆಳವಾದ ದಾರ್ಶನಿಕ ನೆಲೆಯಿಂದ ಸಮಾನತೆಯ ಪ್ರತಿಪಾದನೆಯನ್ನು ಮಾಡುತ್ತದೆ. ಈ ಲೇಖನದಲ್ಲಿ ಲೋಹಿಯಾ ಸಮಾನತೆ ಮತ್ತು ಸಮಚಿತ್ತತೆ ಪರಸ್ಪರಾವಲಂಬಿತ ವಿದ್ಯಮಾನಗಳೆಂದು ಪ್ರತಿಪಾದಿಸುತ್ತಾ, ಸಮಾನತೆ ಮಾನವ ಸಮಾಜದ ಬಾಹ್ಯ ಸಂಘಟನೆಯ ತತ್ತ್ವವಾದರೆ ಸಮಚಿತ್ತತೆ ಮಾನವ ಆಂತರ್ಯದ ಸಂಯಮವನ್ನು ಸಂಘಟಿಸುವ ತತ್ತ್ವ ಎನ್ನುತ್ತಾರೆ. ಅಂತೆಯೇ, ಅವರ "ಹೊಸ ಸಮೀಕರಣ" ಎನ್ನುವ ಇನ್ನೊಂದು ತಾತ್ತ್ವಿಕ ಗಹನತೆಯಿಂದ ಕೂಡಿದ ಲೇಖನ ಸ್ವಾತಂತ್ರ್ಯ ಮತ್ತು ಸಮಾನತೆಗಳ ಹೊಸ ಸಮೀಕರಣದ ರಾಜಕೀಯ ಸೂತ್ರವನ್ನು ಮಂಡಿಸುತ್ತದೆ.

2. ಲೋಹಿಯಾ, ರಾಮಮನೋಹರ್. *"ದಿ ಕಾಸ್ಟ್ ಸಿಸ್ಟಮ್"*, ಲೋಹಿಯಾ ಸಮತಾ ವಿದ್ಯಾಲಯ ನ್ಯಾಸ್: ಹೈದರಾಬಾದ್, 1964

ಲೋಹಿಯಾರವರು ಭಾರತೀಯ ಸಮಾಜದಲ್ಲಿ ಹಾಸುಹೊಕ್ಕಂತಿರುವ ಜಾತಿಪದ್ಧತಿ ಮತ್ತು ಲಿಂಗ ಅಸಮಾನತೆಗಳನ್ನು ವಿಮರ್ಶೆಗೆ ಒಡ್ಡಿದ ಅನೇಕ ಲೇಖನಗಳು ಅವರ "ಜಾತಿಪದ್ಧತಿ" (The Caste System) ಎನ್ನುವ ಲೇಖನ ಮಾಲಿಕೆಯಲ್ಲಿ, ಲೋಹಿಯಾರವರು ಬೇರೆ ಬೇರೆ ಕಾಲಘಟ್ಟಗಳಲ್ಲಿ ಮತ್ತು ಬೇರೆ ಬೇರೆ ಸಂದರ್ಭಗಳಲ್ಲಿ ಬರೆದ ಲೇಖನಗಳ ಅಥವಾ ಮಾಡಿದ ಭಾಷಣಗಳ ಸಂಗ್ರಹ ರೂಪವಾಗಿದೆ. ಈ ಲೇಖನ ಮಾಲಿಕೆಯ ಶೀರ್ಷಿಕೆಯೇ ಸೂಚಿಸುವಂತೆ ಜಾತಿಪದ್ಧತಿ ಲೋಹಿಯಾ ವಿಮರ್ಶೆಯ ಕೇಂದ್ರ ವಸ್ತು. ಆದರೆ ಈ ಲೇಖನಗಳಲ್ಲಿ ಲೋಹಿಯಾ ತನ್ನ ಕಾಲದ ಅನೇಕ ಶಿಕ್ಷಣ ತಜ್ಞರಂತೆ ಜಾತಿಯ ಕುರಿತು ಮಾತನಾಡುವುದಿಲ್ಲ. ಉದಾಹರಣೆಗೆ; ಅಂಬೇಡ್ಕರರ "ಶೂದ್ರರೆಂದರೆ ಯಾರು" (Who are Shudras) ಎನ್ನುವ ಕೃತಿಯಲ್ಲಿ ಕಂಡು ಬರುವ ವ್ಯವಸ್ಥಿತವಾದ ಚಾರಿತ್ರಿಕ ಹಾಗೂ ಮಾನವ ಶಾಸ್ತ್ರೀಯ ನೆಲೆಯ ಜಾತಿವಿಮರ್ಶೆ ಲೋಹಿಯಾರಲ್ಲಿ ಕಾಣಸಿಗುವುದಿಲ್ಲ, ಬದಲಾಗಿ

ಲೋಹಿಯಾ ಓರ್ವ ತಾತ್ತ್ವಿಕ ಅರಿವು ಇರುವ ರಾಜಕೀಯ ಕ್ರಿಯಾಸಕ್ತನ ನೆಲೆಯಲ್ಲಿ ಜಾತಿಪದ್ಧತಿಯ ವಿಮರ್ಶೆಯನ್ನು ನಡೆಸುತ್ತಾರೆ.

"ಜಾತಿ ಪದ್ಧತಿ" ಕೃತಿಯ ಮೊದಲ ಲೇಖನ "ಜಾತಿ ಮತ್ತು ಲಿಂಗಗಳ ನಡುವಿನ ಪ್ರತ್ಯೇಕತೆ" (Two Segregations of Caste and Sex) ಜಾತಿ ಮತ್ತು ಲಿಂಗ ಅಸಮಾನತೆಗಳ ನಡುವಿನ ಅವಿನಾ ಸಂಬಂಧದ ಕುರಿತು ಬೆಳಕು ಚೆಲ್ಲಿದರೆ, "ಶೂದ್ರನಿಗೊಂದು ಪತ್ರ" (Letter to a Shudra) ಎನ್ನುವ ಲೇಖನ ತಾನು ಪ್ರತಿನಿಧಿಸಿದ ಸಮಾಜವಾದಿ ಪಕ್ಷದ ಜಾತಿಯ ಕುರಿತಾದ ಧೋರಣೆಯ ವಿಮರ್ಶೆಯನ್ನು ಮಾಡುತ್ತದೆ. ಈ ಲೇಖನ ಮಾಲಿಕೆಯ ಮತ್ತೊಂದು ಲೇಖನ "ಜಾತಿ ವಿನಾಶಕ್ಕಾಗಿ ಜಾತಿ ಸಂಘಟನೆ" (Caste Organisation for Caste Liquidation) ಜಾತಿ ವಿನಾಶದ ಸಮಾನತವಾದಿ ಆಶಯವನ್ನು ನಿಜಗೊಳಿಸಲು ರೂಪಿಸಿಕೊಳ್ಳಬೇಕಾದ ಕ್ರಿಯಾಚರಣೆಯ ಕುರಿತು ಚರ್ಚಿಸಿದರೆ, "ವಸಿಷ್ಠರು ಮತ್ತು ವಾಲ್ಮೀಕಿಯರು" (Vasista's and Valmiki's) ಎನ್ನುವ ಲೇಖನ ಜಾತಿಪದ್ಧತಿಯ ಸಾಂಸ್ಕೃತಿಕ ವಿಶ್ವವನ್ನು ನಮ್ಮ ಮುಂದೆ ತೆರೆದಿಡುತ್ತದೆ.

ಒಟ್ಟಿನಲ್ಲಿ ಲೋಹಿಯಾರವರ ಜಾತಿಪದ್ಧತಿಯೆನ್ನುವ ಕೃತಿ ಭಾರತದಲ್ಲಿ ಸಮಾನತವಾದಿ ಪ್ರಜಾತಂತ್ರದ ಕಲ್ಪನೆಗೆ ಅತ್ಯವಶ್ಯಕವಾದ ಜಾತಿ ನಿರ್ಮೂಲನದ ಕಾರ್ಯಸೂಚಿಯನ್ನು ನಮ್ಮ ಮುಂದೆ ವಿಷದಪಡಿಸುತ್ತದೆ.

3. ನಾರಾಯಣ್, ಜಯಪ್ರಕಾಶ್. "ವೈ ಸೋಶಿಯಲಿಸಮ್?", ದಿ ಆಲ್ ಇಂಡಿಯಾ ಕಾಂಗ್ರೆಸ್ ಸೋಶಿಯಲಿಸ್ಟ್ ಪಾರ್ಟಿ: ಬನಾರಸ್, 1936

"ಸಮಾಜವಾದ ಯಾಕೆ" ಎನ್ನುವ ಶೀರ್ಷಿಕೆಯಲ್ಲಿ ಪ್ರಕಟಗೊಂಡ ಜಯಪ್ರಕಾಶ್ ನಾರಾಯಣ್‌ರವರ ಈ ಕಿರುಪುಸ್ತಕ ಚಾರಿತ್ರಿಕವಾಗಿ ಮಹತ್ವಪೂರ್ಣವಾದದ್ದು. ಭಾರತದ ರಾಷ್ಟ್ರೀಯ ಹೋರಾಟದ ಗಾಂಧಿ

ಕಾಲಘಟ್ಟದಲ್ಲಿ ಸ್ಥಾಪನೆಗೊಂಡ ಕಾಂಗ್ರೆಸ್ ಸಮಾಜವಾದಿ ಪಕ್ಷದ ಅಧಿಕೃತ ತಾತ್ತ್ವಿಕ ಹೇಳಿಕೆಯನ್ನಾಗಿ ಈ ಕೃತಿಯನ್ನು ಕಾಣಬಹುದು. ವಿಶೇಷವಾಗಿ, ಕಾಂಗ್ರೆಸ್ ಸಮಾಜವಾದಿ ಪಕ್ಷದ ಕಾರ್ಯಕರ್ತರನ್ನು ಉದ್ದೇಶಿಸಿ ಬರೆಯಲ್ಪಟ್ಟ ಈ ಹೊತ್ತಗೆ ಕಳೆದ ಶತಮಾನದ 30 ಮತ್ತು 40ರ ಕಾಲಘಟ್ಟದಲ್ಲಿ ಭಾರತೀಯ ಸಮಾಜವಾದಿಗಳ ಬೈಬಲ್ ಎಂದೇ ಪರಿಗಣಿಸಲ್ಪಟ್ಟಿತ್ತು.

ಸಾಮ್ರಾಜ್ಯಶಾಹಿ ವ್ಯವಸ್ಥೆಗೆ ಎದುರಾಗಿ ಉತ್ಕರ್ಷಕ್ಕೆ ಬಂದ ರಾಷ್ಟ್ರೀಯ ಹೋರಾಟದ ಸನ್ನಿವೇಶದಲ್ಲಿ ಎಡರಾಷ್ಟ್ರವಾದದ ಒಂದು ಅಭಿವ್ಯಕ್ತಿಯಾಗಿ ಕಾಂಗ್ರೆಸ್ ಸಮಾಜವಾದಿ ಪಕ್ಷ ಸ್ಥಾಪಿಸಲ್ಪಟ್ಟ ಹಿನ್ನೆಲೆಯಲ್ಲಿ ಸಮಾಜವಾದದ ಪ್ರಸ್ತುತತೆಯನ್ನು "ಸಮಾಜವಾದ ಯಾಕೆ" ಎನ್ನುವ ಕೃತಿಯಲ್ಲಿ ಜಯಪ್ರಕಾಶ್ ನಾರಾಯಣ್‌ರವರು ಚರ್ಚಿಸುತ್ತಾರೆ. ಕೃತಿಯ ಮೊದಲನೆಯ ಅಧ್ಯಾಯ ಸಮಾಜವಾದದ ಸೈದ್ಧಾಂತಿಕ ಸ್ವರೂಪವನ್ನು ಚರ್ಚಿಸಿದರೆ, ಎರಡನೆಯ ಅಧ್ಯಾಯ ಕಾಂಗ್ರೆಸ್ ಸಮಾಜವಾದಿ ಪಕ್ಷದ ಕಾರ್ಯಸೂಚಿಯನ್ನು ಪ್ರಸ್ತುತಪಡಿಸುತ್ತದೆ. ಅಂತೆಯೇ, ಕೃತಿಯ ಮೂರನೆಯ ಅಧ್ಯಾಯ ಭಾರತದಲ್ಲಿ ಸಮಾಜವಾದಕ್ಕೆ ಬದಲಿ ಆಗಬಹುದಾದ ತಾತ್ತ್ವಿಕ, ರಾಜಕೀಯ ಸಿದ್ಧಾಂತಗಳನ್ನು ಚರ್ಚಿಸುತ್ತದೆ, ನಾಲ್ಕನೆಯ ಮತ್ತು ಕೊನೆಯ ಅಧ್ಯಾಯ ಸಾಮ್ರಾಜ್ಯಶಾಹಿ ವಿರೋಧಿ ನೆಲೆಯಲ್ಲಿ ಕಾಂಗ್ರೆಸ್ ಸಮಾಜವಾದಿ ಪಕ್ಷ ರೂಪಿಸಿಕೊಳ್ಳಬೇಕಾದ ಕಾರ್ಯತಂತ್ರಗಳನ್ನು ಪರಿಶೀಲಿಸುತ್ತದೆ. ಭಾರತದ ಸಮಾಜವಾದಿಗಳ ಸಮಾನತವಾದಿ ಪ್ರಜಾತಾಂತ್ರಿಕ ಕಾಳಜಿಗಳನ್ನು ಚಾರಿತ್ರಿಕವಾಗಿ ಗುರುತಿಸುವ ನೆಲೆಯಲ್ಲಿ ಈ ಗ್ರಂಥ ಬಹು ಮುಖ್ಯವಾಗಿದೆ.

4. ಪ್ರಸಾದ್, ಬಿಮಲ್. (ಸಂವಾದ) "ಜಯಪ್ರಕಾಶ್ ನಾರಾಯಣ್ ಎಸೆನ್‌ಶಿಯಲ್ ರೈಟಿಂಗ್ಸ್ (1992–1979)", ಕೊರ್ನಾಕ್ ಪಬ್ಲಿಕೇಷನ್ಸ್: ನವದೆಹಲಿ, 2002

"ಜಯಪ್ರಕಾಶ್ ನಾರಾಯಣ್‌ರವರ ಆಯ್ದ ಲೇಖನಗಳು (1929–1979)" ಎನ್ನುವ ಕೃತಿ ಅವರ ಜನ್ಮಶತಾಬ್ದಿಯ ಭಾಗವಾಗಿ ಪ್ರಕಟಗೊಂಡಿದೆ. ಈ ಕೃತಿ ಜೆ. ಪಿ.ಯವರ ಅರ್ಧಶತಮಾನದ ಕಾಲದ ಉತ್ಕಟ ಸಾಮಾಜಿಕ ರಾಜಕೀಯ ಬದುಕಿನ ವಿವಿಧ ಮಜಲುಗಳನ್ನು ಅವರು ಪ್ರತಿನಿಧಿಸಿದ ವೈವಿಧ್ಯಮಯ ಪ್ರಜಾತಾಂತ್ರಿಕ ಕಾಳಜಿಗಳನ್ನು ನಮ್ಮ ಮುಂದಿರಿಸುತ್ತದೆ. ತಮ್ಮ ಸಾರ್ವಜನಿಕ ಬದುಕಿನ ಪ್ರಾರಂಭದ ಕಾಲಘಟ್ಟದಲ್ಲಿ ಮಾರ್ಕ್ಸ್‌ವಾದಿ ತಾತ್ತ್ವಿಕ ನೆಲೆಗಟ್ಟಿನಿಂದ ಸಮಾಜವಾದದ ಕುರಿತು ಜೆ.ಪಿ. ಮಾಡಿದ ಪ್ರತಿಪಾದನೆಗಳಿಂದ ಹಿಡಿದು ಅವರ ಬದುಕಿನ ಕೊನೆಯ ಕಾಲಘಟ್ಟದಲ್ಲಿ ಅವರು ಸಂಘಟಿಸಿದ ಸಮಗ್ರ ಕ್ರಾಂತಿಯ ರಾಜಕಾರಣದ ತನಕದ ಬೌದ್ಧಿಕ ಯಾನದ ವಿವಿಧ ಮಜಲುಗಳನ್ನು ಈ ಗ್ರಂಥದಲ್ಲಿ ಕಾಣಬಹುದು.

20ನೇ ಶತಮಾನದ 30 ಹಾಗೂ 40ರ ಕಾಲಘಟ್ಟದಲ್ಲಿ ಜಯಪ್ರಕಾಶ್‌ರವರು ಸಮಾಜವಾದದ ತಾತ್ತ್ವಿಕತೆಯ ಕುರಿತು ಬರೆದ ಎರಡು ಪ್ರಮುಖ ಲೇಖನಗಳು "ಸಮಾಜವಾದದ ಬುನಾದಿ" (The Foundation of Socialism) ಮತ್ತು "ಸಮಾಜವಾದದ ನನ್ನ ಕಲ್ಪನೆ" (My Picture of Socialism) ಅವರ ಪ್ರಖರವಾದ ಮಾರ್ಕ್ಸ್‌ವಾದಿ ಚಿಂತನೆಯನ್ನು ಪ್ರತಿಬಿಂಬಿಸುತ್ತವೆ. ಸ್ವಾತಂತ್ರ್ಯೋತ್ತರ ಭಾರತದ ಎರಡು ದಶಕಗಳ ಕಾಲಾವಧಿಯಲ್ಲಿ ಜೆ. ಪಿಯವರ ಸಾರ್ವಜನಿಕ ಬದುಕಿನಲ್ಲಿ ಸಂಭವಿಸಿದ ಮಹತ್ವದ ತಾತ್ತ್ವಿಕ ಪಲ್ಲಟಗಳನ್ನು ಅವರ ಈ ಕೃತಿಯಲ್ಲಿ ಪ್ರಕಟಿಸಲಾದ ಮೂರು ಪ್ರಮುಖ ಲೇಖನಗಳಾದ, "ಗುರಿಗಳು ಮತ್ತು ಮಾರ್ಗಗಳು" (Ends and Means) "ಒಳ್ಳೆಯತನದ ಪ್ರೇರಣೆಗಳು" (Incentives to Goodness) ಮತ್ತು "ಸಮಾಜವಾದದ ಸೈದ್ಧಾಂತಿಕ ಸಮಸ್ಯೆಗಳು" (The Ideological Problems of Socialism) ಸ್ಪಷ್ಟವಾಗಿ ಪ್ರತಿನಿಧಿಸುತ್ತವೆ. ಅಂತೆಯೇ, 70ರ ದಶಕದಲ್ಲಿ ಜೆ. ಪಿ. ಪ್ರತಿಪಾದಿಸಿದ ಸಮಗ್ರ

ಕ್ರಾಂತಿಯ ಪರಿಕಲ್ಪನೆಯನ್ನು "ಸಮಗ್ರ ಕ್ರಾಂತಿ ಯಾಕೆ ಮತ್ತು ಹೇಗೆ?" (Total Revolution: Why and How?) ಎನ್ನುವ ಲೇಖನ ವಿಸ್ತೃತವಾಗಿ ನಿರೂಪಿಸುತ್ತದೆ. ಅಷ್ಟು ಮಾತ್ರವಲ್ಲದೇ, ಈ ಸಂಪಾದಿತ ಕೃತಿಯಲ್ಲಿ ಪ್ರಕಟಗೊಂಡ ಇತರ ಅನೇಕ ಲೇಖನಗಳು ಜೆ. ಪಿ.ಯವರ ವೈವಿಧ್ಯಮಯ ಪ್ರಾದೇಶಿಕ, ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಕಾಳಜಿಗಳನ್ನು ನಮಗೆ ಪರಿಚಯಿಸುತ್ತದೆ.

ಒಟ್ಟಿನಲ್ಲಿ ಜಯಪ್ರಕಾಶ್‌ರವರ ಸುಮಾರು 40 ಲೇಖನಗಳನ್ನು ಒಳಗೊಂಡ ಈ ಸಂಪಾದಿತ ಕೃತಿ ಅವರ ಸಾರ್ವಜನಿಕ ಬದುಕಿನ ವಿವಿಧ ಕಾಲಘಟ್ಟಗಳಲ್ಲಿ ಅವರು ನಡೆಸಿದ ಚಿಂತನೆಯನ್ನು, ಪ್ರತಿನಿಧಿಸಿದ ಕಾಳಜಿಗಳನ್ನು ಹಾಗು ಸಂಘಟಿಸಿದ ಹೋರಾಟಗಳನ್ನು ನಮಗೆ ಪರಿಚಯಿಸುತ್ತದೆ. ತಮ್ಮ 50 ವರ್ಷಗಳ ಸಾರ್ವಜನಿಕ ಬದುಕಿನಲ್ಲಿ ಮಾರ್ಕ್ಸ್‌ವಾದದಿಂದ ಸರ್ವೋದಯಕ್ಕೆ ಮತ್ತು ಸರ್ವೋದಯದಿಂದ ಸಮಗ್ರ ಕ್ರಾಂತಿಗೆ ಪುನರ್ ನಿರ್ವಚಿತಗೊಂಡ ಜಯಪ್ರಕಾಶ್ ನಾರಾಯಣ್‌ರವರ ಸೈದ್ಧಾಂತಿಕ ರಾಜಕಾರಣದ ಕರ್ಷಣೆಯನ್ನು ಈ ಕೃತಿ ನಮ್ಮ ಮುಂದೆ ವಿಷದಪಡಿಸುತ್ತದೆ.

5. ದೇವ, ಆಚಾರ್ಯ ನರೇಂದ್ರ. ಮತ್ತು ಮೆಹರಲಿ, ಯುಸೂಪ್(ಸಂ). **"ಸೋಶಯಲಿಸಮ್ ಆ್ಯಂಡ್ ನ್ಯಾಷನಲ್ ರೆವಲ್ಯುಶನ್", ಪದ್ಮ ಪಬ್ಲಿಕೇಶನ್ ಲಿಮಿಟೆಡ್: ಬೊಂಬಾಯಿ, 1946**

"ಸಮಾಜವಾದ ಮತ್ತು ರಾಷ್ಟ್ರೀಯ ಕ್ರಾಂತಿ" ಎನ್ನುವ ಶೀರ್ಷಿಕೆಯಲ್ಲಿ ಸಮಾಜವಾದಿ ನಾಯಕ ಆಚಾರ್ಯ ನರೇಂದ್ರದೇವರ ಪ್ರಾತಿನಿಧಿಕ ಬರಹಗಳನ್ನು ಅವರ ಸಮಾಜವಾದಿ ಸಹಭಾಗಿ ಯುಸುಫ್ ಮೆಹರಾಲಿ ಸಂಪಾದಿಸಿ ಪ್ರಕಟಿಸಿದ್ದಾರೆ. ತಮ್ಮ ಅನಾರೋಗ್ಯದ ಕಾರಣಗಳಿಂದಾಗಿ ನಿರಂತರವಾದ ಮತ್ತು ಸಕ್ರಿಯವಾದ ಸಾಮಾಜಿಕ ಬದುಕನ್ನು ನರೇಂದ್ರದೇವರಿಗೆ ನಿರ್ವಹಿಸಲು ಸಾಧ್ಯವಾಗದಿದ್ದರೂ ಅವರ ದಕ್ಷ ನಾಯಕತ್ವ ಮತ್ತು ಪ್ರಖರ ವಿಚಾರಗಳು ಭಾರತದ ಸಮಾಜವಾದಿ ಆಂದೋಲನದ ಅತ್ಯಂತ ಪ್ರಮುಖ

ಅಧ್ಯಾಯವಾಗಿದೆ ಎನ್ನುವ ಅಂಶವನ್ನು ಅವರ ಈ ಸಂಪಾದಿತ ಕೃತಿ ನಮಗೆ ಮನವರಿಕೆ ಮಾಡಿಕೊಡುತ್ತದೆ.

ಓರ್ವ ಸಂಸ್ಕೃತಿ ನಿಷ್ಠ ಮಾರ್ಕ್ಸ್‌ವಾದಿ ಚಿಂತಕರಾಗಿ ನರೇಂದ್ರದೇವರ ಅತ್ಯಂತ ನಡುವಿನ ಕಾಳಜಿ ಸಮಾಜವಾದದ ತತ್ತ್ವಗಳನ್ನು ರಾಷ್ಟ್ರ ವಿಮೋಚನೆಯ ಕಾಳಜಿಗಳೊಂದಿಗೆ ಜೋಡಿಸುವುದಾಗಿತ್ತು. ಅಂತೆಯೇ, ಭಾರತದ ಸಾಂಸ್ಕೃತಿಕ ಸಂದರ್ಭದಲ್ಲಿ ಸಮಾಜವಾದದ ಸಿದ್ಧಾಂತವನ್ನು ಮರುನಿರ್ವಚಿಸುವುದು ಕೂಡ ಅವರ ಪ್ರಾಥಮಿಕ ಕಾಳಜಿಯ ಭಾಗವಾಗಿತ್ತು. ಈ ಸಂಕಲನದ ವಿವಿಧ ಲೇಖನಗಳು ನರೇಂದ್ರದೇವರ ಸೈದ್ಧಾಂತಿಕ ಸಮನ್ವಯದ ವಿವಿಧ ರೂಪಗಳನ್ನು ಮತ್ತು ನೆಲೆಗಳನ್ನು ಪ್ರಸ್ತುತಪಡಿಸುತ್ತವೆ.

ಕಾಂಗ್ರೆಸ್ ಸಮಾಜವಾದಿ ಪಕ್ಷದ ಅತ್ಯಂತ ಪ್ರಮುಖ ತಾತ್ವಿಕ ವಕ್ತಾರರಾಗಿ ನರೇಂದ್ರದೇವ ಭಾರತದ ಸ್ವಾತಂತ್ರ್ಯ ಹೋರಾಟದ ಚಾರಿತ್ರಿಕ ಸಂದರ್ಭದಲ್ಲಿ ಸಮಾಜವಾದದ ಆಶಯಗಳನ್ನು ಪುನರ್ ನಿರ್ವಚಿಸುವ ಪ್ರಯತ್ನವನ್ನು ನಡೆಸುತ್ತಾರೆ. ಪ್ರಸ್ತುತ ಕೃತಿಯ ಮೊದಲನೆಯ ವಿಭಾಗದ "ಕಾಂಗ್ರೆಸ್ ಸಮಾಜವಾದಿ ಪಕ್ಷ" (The Congress Socialist Party) ಎನ್ನುವ ಶೀರ್ಷಿಕೆಯ ಲೇಖನ ಕಾಂಗ್ರೆಸ್ ಸಮಾಜವಾದಿ ಪಕ್ಷದ ತಾತ್ತ್ವಿಕ ಸ್ವರೂಪದ ನಿಷ್ಕರ್ಷೆ ಮತ್ತು ಅದರ ಚಾರಿತ್ರಿಕ ಮಹತ್ವವನ್ನು ಚರ್ಚಿಸುತ್ತದೆ. ಈ ಲೇಖನದಲ್ಲಿ ನರೇಂದ್ರದೇವರು ಭಾರತದ ಸ್ವಾತಂತ್ರ್ಯ ಹೋರಾಟವನ್ನು ಒಂದು ಪ್ರಗತಿಶೀಲ ವಿದ್ಯಮಾನವೆಂದು ಬಣ್ಣಿಸುತ್ತಾ ಆ ಹೋರಾಟದಲ್ಲಿ ಸಮಾಜವಾದಿಗಳ ಭಾಗವಹಿಸುವಿಕೆಯನ್ನು ಸಮರ್ಥಿಸುತ್ತಾರೆ. ಹಾಗಿದ್ದೂ, ಸ್ವಾತಂತ್ರ್ಯ ಹೋರಾಟದ ಕುಂದು ಕೊರತೆಗಳ ಕುರಿತು ಎಚ್ಚರದಿಂದ ಇರುವ ಅವರು ರಾಷ್ಟ್ರೀಯ ಹೋರಾಟದ ಅನಿವಾರ್ಯ ಭಾಗವಾದ ಸಮಾಜವಾದಿಗಳು ನಿರ್ವಹಿಸಬೇಕಾದ ಕರ್ತವ್ಯಗಳ ಕುರಿತು ಸ್ಪಷ್ಟವಾದ ಮಾತುಗಳನ್ನು ಬರೆಯುತ್ತಾರೆ. ಈ ಸಂಕಲಿತ ಗ್ರಂಥದ ಹೆಚ್ಚು ಕಮ್ಮಿ ಎಲ್ಲಾ ಲೇಖನಗಳು ಭಾರತದ ಸ್ವಾತಂತ್ರ್ಯ ಹೋರಾಟದ ಸಂದರ್ಭ,

ರಾಷ್ಟ್ರವಾದದ ತಾತ್ತ್ವಿಕತೆ, ಸಮಾಜವಾದದ ಅವಶ್ಯಕತೆ, ರೈತರ ಮತ್ತು ಕಾರ್ಮಿಕರ ಸಮಸ್ಯೆಗಳು, ಬಂಡವಾಳಶಾಹಿಯ ಸ್ವರೂಪ ಇವೇ ಮೊದಲಾದ ವಿದ್ಯಮಾನಗಳ ಕುರಿತು ವಿವೇಚನಾತ್ಮಕ ನೋಟಗಳನ್ನು ನೀಡುತ್ತವೆ.

ಆನುಷಂಗಿಕ ಪಠ್ಯಗಳು:

1. ರೆಡ್ಡಿ, ಜಿ.ಕೆ.ಸಿ. (ಸಂ) "ಫಿಫ್ಟಿ ಇಯರ್ಸ್ ಆಫ್ ಸೋಶಿಯಲಿಸ್ಟ್ ಮೂವ್‌ಮೆಂಟ್ ಇನ್ ಇಂಡಿಯಾ", ಸಮತಾ ಇರಾ ಪಬ್ಲಿಕೇಶನ್ಸ್: ನವದೆಹಲಿ, 1984

ಜಿ.ಕೆ.ಸಿ ರೆಡ್ಡಿಯವರು ಸಂಪಾದಿಸಿದ "ಭಾರತದ ಸಮಾಜವಾದಿ ಆಂದೋಲನದ 50 ವರ್ಷಗಳು" ಎನ್ನುವ ಕೃತಿಯನ್ನು ಈ ಅಧ್ಯಯನದ ಪ್ರಾಥಮಿಕ ಆಕರವೆಂದು ಕೂಡ ಕೆಲವು ಕಾರಣಗಳಿಗಾಗಿ ಪರಿಗಣಿಸಬಹುದು. ಮೊದಲನೆಯದಾಗಿ, ಈ ಕೃತಿ ಸಮಾಜವಾದಿ ಆಂದೋಲನದಲ್ಲಿ ಪ್ರತ್ಯಕ್ಷವಾಗಿ ಭಾಗವಹಿಸಿದ ಅನೇಕ ಮುಂದಾಳುಗಳ ಲೇಖನಗಳನ್ನು ಒಳಗೊಂಡಿದೆ ಮತ್ತು ಅವರೆಲ್ಲರೂ ಭಾರತದ ಸಮಾಜವಾದಿ ಅಂದೋಲನದ ವಿವಿಧ ಆಯಾಮಗಳ ಕುರಿತು ಯಾತಾರ್ಥವಾದ ನಿರೂಪಣೆಯನ್ನು ಮಾಡಿದ್ದಾರೆ. ಎರಡನೆಯದಾಗಿ, ಈ ಕೃತಿಯ ಕೊನೆಯ ಭಾಗ ಸಮಾಜವಾದಿ ಆಂದೋಲನಕ್ಕೆ ಸಂಬಂಧಿಸಿದ ಅನೇಕ ಮಹತ್ವದ ದಸ್ತಾವೇಜುಗಳನ್ನು ಹೊಂದಿದೆ. ಹೀಗಾಗಿ, ಇದನ್ನು ಪ್ರಾಥಮಿಕ ಆಕರವೆಂದೆ ಪರಿಗಣಿಸಬಹುದು.

ಈ ಕೃತಿಯ ಮೊದಲ ಲೇಖನ "ಕಾಂಗ್ರೆಸ್ ಸಮಾಜವಾದಿ ಪಕ್ಷದ ಸ್ಥಾಪನೆ" (The Formation of the Congress Socialist Party) ಭಾರತದ ಸಮಾಜವಾದಿ ಆಂದೋಲನದ ಸೈದ್ಧಾಂತಿಕ ರಾಜಕೀಯ ಚರಿತ್ರೆಯನ್ನು ಸಾದರಪಡಿಸುತ್ತದೆ. 19ನೆಯ ಶತಮಾನದ ಕೊನೆಯ ಭಾಗದಿಂದ ಆರಂಭಿಸಿ

ಸಮಾಜವಾದದ ಚಿಂತನೆ ಹೇಗೆ 20ನೆಯ ಶತಮಾನದ ನಡುಕಾಲದಲ್ಲಿ ಭಾರತದಲ್ಲಿ ಸ್ಫುಟಗೊಳ್ಳುತ್ತದೆ ಎನ್ನುವುದನ್ನು ಈ ಲೇಖನ ನಮಗೆ ತಿಳಿಸುತ್ತದೆ. ಅಂತೆಯೇ, ಆಚಾರ್ಯ ನರೇಂದ್ರದೇವರ "ಯಾಕೆ ಕಾಂಗ್ರೆಸ್ ಸಮಾಜವಾದಿ ಪಕ್ಷ" (Why Congress Socialist Party?) ಎನ್ನುವ ಲೇಖನ ಭಾರತೀಯ ಸಮಾಜವಾದದ ತಾತ್ತ್ವಿಕ ಪ್ರಸ್ತಾನವನ್ನು ನಮ್ಮ ಮುಂದಿಡುತ್ತದೆ. ಸುರೇಂದ್ರ ಮೋಹನ್‌ರವರ "ಪ್ರಕ್ಷುಬ್ಧ ದಿನಗಳು: 1952–55" (The Turbulent Years:1952-55) ಮತ್ತು ಸಚ್ಚಿದಾನಂದ ಸಿನ್ಹಾರವರ "ಸಮಾಜವಾದಿ ಆಂದೋಲನದ ಐವತ್ತು ವರ್ಷಗಳು: ಒಂದು ಸಮೀಕ್ಷೆ" (Fifty years of the Socialist Movement: An Overview) ಎನ್ನುವ ಲೇಖನಗಳು ಭಾರತದ ಸಮಾಜವಾದಿ ಆಂದೋಲನದ ವಿವಿಧ ಕಾಲಘಟ್ಟಗಳನ್ನು ನಮಗೆ ಪರಿಚಯಿಸುತ್ತವೆ.

ಅಂತೆಯೇ, ಕೃತಿಯ ಕೊನೆಯ ಭಾಗ ಈಗಾಗಲೇ ತಿಳಿಸಿದಂತೆ ಭಾರತದ ಸಮಾಜವಾದಿ ಆಂದೋಲನದ ಪ್ರಣಾಳಿಕೆಗಳನ್ನು, ನಿರ್ಣಾಯಗಳನ್ನು ಮತ್ತು ಇತರ ಅನೇಕ ಪ್ರಮುಖ ದಾಖಲೆಗಳನ್ನು ಒಳಗೊಂಡಿದೆ.

2. **ಹಾಥ್ಯೊಕ್ಸ್, ಜಾನ್ ಪೆಟ್ರಿಕ್. "ಕಮ್ಯುನಿಸಮ್ ಆ್ಯಂಡ್ ನ್ಯಾಶನಲಿಸಮ್ ಇನ್ ಇಂಡಿಯಾ", ಪ್ರಿನ್ ಸ್ಟನ್ ಯುನಿವರ್ಸಿಟಿ ಪ್ರೆಸ್: ನ್ಯೂ ಜರ್ಸಿ, 1968**

"ಭಾರತದಲ್ಲಿ ರಾಷ್ಟ್ರೀಯತೆ ಮತ್ತು ಸಾಮ್ಯವಾದ" ಎನ್ನುವ ಗ್ರಂಥದಲ್ಲಿ ಜಾನ್ ಪೆಟ್ರಿಕ್ ಹಾಥ್ಯೊಕ್ಸ್‌ರವರು ಭಾರತದ ಎಡಪಂಥೀಯ ಚಿಂತನೆಯ ಸಮಗ್ರ ಅವಲೋಕನದ ಹಿನ್ನೆಲೆಯಲ್ಲಿ, ಮೂವತ್ತರ ದಶಕದ ಭಾರತದ ಸಮಾಜವಾದಿ ನಾಯಕತ್ವದ ತಾತ್ತ್ವಿಕ ಸ್ವರೂಪವನ್ನು ವಿಮರ್ಶಾತ್ಮಕವಾಗಿ ಚರ್ಚಿಸುತ್ತಾರೆ. ಸಮಾಜವಾದದ ತಾತ್ತ್ವಿಕತೆಗೆ ಸಂಬಂಧಿಸಿದಂತೆ ಕಾಂಗ್ರೆಸ್ ಸಮಾಜವಾದಿ ಪಕ್ಷದ ನಾಯಕತ್ವದಲ್ಲಿ ಕಂಡು ಬರುವ ವಿಭಿನ್ನ ಧೋರಣೆಗಳನ್ನು ವಿವರಿಸುತ್ತಾ ಲೇಖಕರು, ಈ ಸಮಾಜವಾದಿ

ನಿಲುವುಗಳು ಒಂದು ಅಸಮತೋಲಿತ ಸಂಯೋಜನೆಯಾಗಿತ್ತು ಎಂದು ಪ್ರತಿಪಾದಿಸುತ್ತಾರೆ. ಕಾಂಗ್ರೆಸ್ ಸಮಾಜವಾದಿ ನಾಯಕತ್ವದಲ್ಲಿ ಮೂರು ವಿಭಿನ್ನ ಬಗೆಯ ಪರಸ್ಪರ ಸಂಘರ್ಷಣೆಯ ಸಂಬಂಧಗಳಿರುವ ಸಮಾಜವಾದಿ ದೃಷ್ಟಿಕೋನಗಳನ್ನು ಲೇಖಕರು ಇಲ್ಲಿ ಗುರುತಿಸುತ್ತಾರೆ. ಮಾರ್ಕ್ಸ್‌ವಾದ, ಪ್ರಜಾತಾಂತ್ರಿಕ ಸಮಾಜವಾದ ಮತ್ತು ಗಾಂಧಿವಾದದ ಮರುನಿರ್ವಚನದಂತೆ ಕಾಣುವ ಸಮಾಜವಾದಿ ಚಿಂತನೆ ಇವುಗಳನ್ನು ಪ್ರತಿನಿಧಿಸುವ ಕಾಂಗ್ರೆಸ್ ಸಮಾಜವಾದಿ ಪಕ್ಷದ ಸಹಮತ ಮತ್ತು ಭಿನ್ನಮತಗಳ ಒಂದು ತ್ರಾಸದಾಯಕ ಸಮ್ಮಿಲನವೆಂದು ಹಾಥ್ರೋಕ್ಸ್ ತಮ್ಮ ಗ್ರಂಥದಲ್ಲಿ ಪ್ರತಿಪಾದಿಸುತ್ತಾರೆ.

ಅವರು ಪ್ರತಿಪಾದಿಸುವಂತೆ ಸಮಾಜವಾದಿ ರಾಜಕಾರಣದ ನಾಯಕತ್ವದಲ್ಲಿ ಕಂಡುಬರುವ ಈ ಸೈದ್ಧಾಂತಿಕ ಭಿನ್ನ ಮತಗಳೇ ಸ್ವಾತಂತ್ರ್ಯೋತ್ತರ ಕಾಲಘಟ್ಟದಲ್ಲಿ ಸಮಾಜವಾದಿ ಆಂದೋಲನದ ವಿಘಟನೆಗೆ ಕಾರಣವಾಯಿತು. ಹಾಗಾಗಿ, ಭಾರತದ ಸಮಾಜವಾದಿ ಆಂದೋಲನದ ಚರಿತ್ರೆಯನ್ನು ಬೌದ್ಧಿಕ ಒಡಕುಗಳ ಹಾಗೂ ರಾಜಕೀಯ ವಿಘಟನೆಗಳ ಚರಿತ್ರೆ ಎಂದು ಅನೇಕ ವ್ಯಾಖ್ಯಾನಕಾರರು ನಿರೂಪಿಸಿದ್ದಾರೆ.

3. ಸಿನ್ಹಾ, ಎಲ್. ಪಿ. "ದ ಲೆಫ್ಟ್ ವಿಂಗ್ ಇನ್ ಇಂಡಿಯಾ: 1919–47", ನ್ಯೂ ಪಬ್ಲೀಶರ್: ಮುಜಾಪುರ್, 1965

ಎಲ್. ಪಿ. ಸಿನ್ಹಾರವರು ತಮ್ಮ ಸಂಶೋಧನಾ ಮಹಾಪ್ರಬಂಧವನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿರುವ ಈ ಗ್ರಂಥ 19 ಹಾಗೂ 20ನೆಯ ಶತಮಾನದ ಭಾರತದಲ್ಲಿ ವ್ಯಕ್ತಗೊಂಡ ಎಲ್ಲ ಬಗೆಯ ಎಡಪಂಥೀಯ ಪ್ರಗತಿಪರ ಹೋರಾಟಗಳನ್ನು ಮತ್ತು ಚಿಂತನೆಗಳನ್ನು ದಾಖಲಿಸುವ ಬೃಹತ್ ಪ್ರಯಾಸವನ್ನು ನಡೆಸುತ್ತದೆ. ಸಿನ್ಹಾ ಈ ಎರಡು ಶತಮಾನಗಳಲ್ಲಿ ಉತ್ಕರ್ಷಕ್ಕೆ ಬಂದ ಎಲ್ಲಾ ಸಣ್ಣ ಹಾಗೂ ದೊಡ್ಡ ಎಡಪಂಥೀಯ ಸಂಘಟನೆಗಳನ್ನು ರೈತ ಮತ್ತು ಕಾರ್ಮಿಕ ಸಂಘಗಳನ್ನು ಹಾಗೂ ಅವುಗಳು ನಡೆಸಿದ ಹೋರಾಟಗಳನ್ನು ದಾಖಲಿಸುತ್ತಾರೆ. ಅವು ಪ್ರತಿನಿಧಿಸಿದ ಸಿದ್ಧಾಂತಗಳ

ರೂಪುರೇಷೆಗಳನ್ನು ಪರಿಶೀಲಿಸುತ್ತಾರೆ. ಈ ಸಂಘಟನೆ ಮತ್ತು ಹೋರಾಟಗಳ ನಾಯಕರುಗಳ ವ್ಯಕ್ತಿತ್ವ ಹಾಗೂ ವಿಚಾರಗಳ ವಿಮರ್ಶೆಯನ್ನು ನಡೆಸಿದ್ದಾರೆ. ಬಹುಶಃ, ಸಿನ್ಹಾರವರ ಈ ಪುಸ್ತಕ ಭಾರತದ ಎಡಪಂಥೀಯ ಚರಿತ್ರೆಯ ಒಂದು ಪ್ರಮುಖ ದಸ್ತಾವೇಜಾಗಿ ಕಾಣಿಸುತ್ತದೆ.

4. ಗುಹಾ, ರಾಮಚಂದ್ರ. (ಸಂ) "ಮೇಕರ್ಸ್ ಆಫ್ ಮಾರ್ಡನ್ ಇಂಡಿಯಾ", ಹಾರ್ಡ್‌ವರ್ಡ್ ಯುನಿವರ್ಸಿಟಿ ಪ್ರೆಸ್: ನವದೆಹಲಿ, 2011

ರಾಮಚಂದ್ರ ಗುಹಾರವರು ಸಂಪಾದಿಸಿರುವ 'ನವಭಾರತದ ನಿರ್ಮಾಪಕರು' ಎನ್ನುವ ಕೃತಿಯಲ್ಲಿ ಸಮಾಜವಾದಿ ಚಿಂತಕರ ಆಯ್ದ ಬರಹಗಳನ್ನು ಒಳಗೊಂಡ ಪ್ರತ್ಯೇಕ ಅಧ್ಯಾಯಗಳಿವೆ. ಈ ಸಂಪಾದಿತ ಗ್ರಂಥದಲ್ಲಿ ಒಟ್ಟು 19 ಚಿಂತಕರ ರಾಜಕೀಯ ಮತ್ತು ಬೌದ್ಧಿಕ ಬದುಕಿನ ಕಿರುಟಿಪ್ಪಣಿಯ ಜೊತೆಗೆ ಚಿಂತಕರ ಮಹತ್ವದ ಲೇಖನಗಳಿವೆ. ರಾಮಮನೋಹರ ಲೋಹಿಯಾರನ್ನು ದೇಶೀಯ ಸಮಾಜವಾದಿ ಎಂದು ಗುರುತಿಸುವ ಲೇಖಕರು ಲೋಹಿಯಾರ 'ಜಾತಿ ಪದ್ದತಿ' (The Caste System) ಮತ್ತು 'ಇಂಗ್ಲೀಷ್‌ನ್ನು ತೊಲಗಿಸಿ' (Angrezi Hatao) ಎನ್ನುವ ಪ್ರಮುಖ ಲೇಖನಗಳನ್ನು ಈ ಗ್ರಂಥದಲ್ಲಿ ಒಳಗೊಳ್ಳುತ್ತಾರೆ. ಜಯಪ್ರಕಾಶ್ ನಾರಾಯಣ್‌ರವರ ರಾಜಕೀಯ ವಿಕೇಂದ್ರೀಕರಣದ ಚಿಂತನೆಗಳನ್ನು ಮರುನಿರ್ವಚಿಸುವ ಪ್ರಮುಖ ಲೇಖನಗಳನ್ನು ಈ ಗ್ರಂಥವು ಒಳಗೊಳ್ಳುತ್ತದೆ. ಆಧುನಿಕ ಭಾರತವನ್ನು ಕಟ್ಟಿದ ಮಹಾನ್ ನಾಯಕರ ಸಾಲಿಗೆ ಜಯಪ್ರಕಾಶ್ ನಾರಾಯಣ್ ಮತ್ತು ಲೋಹಿಯಾರನ್ನು ಸೇರಿಸುವ ಮೂಲಕ ರಾಮಚಂದ್ರಗುಹಾ ಆಧುನಿಕ ಭಾರತದ ಬೌದ್ಧಿಕ ಚರಿತ್ರೆಯಲ್ಲಿ ಅವರಿಗೆ ಮಹತ್ವದ ಸ್ಥಾನವನ್ನು ಒದಗಿಸುತ್ತಾರೆ.

5. ವೋರಾ, ರಾಜೇಂದ್ರ. ಮತ್ತು ಪಲ್ಶೀಕರ್, ಸುಹಾಸ್. "ಇಂಡಿಯನ್ ಡೆಮೊಕ್ರಸಿ: ಮೀನಿಂಗ್ಸ್ ಆ್ಯಂಡ್ ಪ್ರೇಕ್ಟೀಸಸ್", ಸೇಜ್ ಪಬ್ಲಿಕೇಶನ್ಸ್: ನವದೆಹಲಿ, 2003

ರಾಜೇಂದ್ರ ವೋರಾ ಮತ್ತು ಸುಹಾಸ್ ಪಲ್ಶೀಕರ್‌ರವರು ಸಂಪಾದಿಸಿದ ಈ ಕೃತಿ ಭಾರತದ ಪ್ರಜಾತಂತ್ರ ಒಂದು ಕಾಲಾವಧಿಯಲ್ಲಿ ಎದುರುಗೊಂಡ ಬಡತನ, ಪ್ರತ್ಯೇಕತಾವಾದ ಮತ್ತು ಕೋಮುವಾದದ ಸವಾಲುಗಳನ್ನು ಎದುರಿಸುತ್ತಲೇ ಹೇಗೆ ಒಂದು ತಾತ್ತ್ವಿಕ ರಾಜಕೀಯ ವಿದ್ಯಮಾನವಾಗಿ ತನ್ನನ್ನು ನಿರ್ವಹಿಸಿಕೊಂಡಿದೆ ಎಂಬುದನ್ನು ವಿಶ್ಲೇಷಿಸುತ್ತದೆ. ಒಂದು ಬಹುರೂಪಿ ವಿದ್ಯಮಾನವಾಗಿ ಭಾರತದ ಪ್ರಜಾತಂತ್ರ ಕೆಲವೊಮ್ಮೆ ತನ್ನ ನೀತಿಯಲ್ಲಿ ಫ್ಯಾಸಿಸ್ಟ್ ರೂಪವನ್ನು ತಳೆದರೂ ಭಾರತದಂತಹ ಅಸಮಾನ ಸಮಾಜದಲ್ಲಿ ಅದು ಆಳವಾಗಿ ನೆಲೆಯೂರಿರುವ ಬಗ್ಗೆ ಲೇಖಕರು ಈ ಕೃತಿಯಲ್ಲಿ ಚರ್ಚಿಸುತ್ತಾರೆ. ಈ ಸಂಪಾದಿತ ಕೃತಿಯಲ್ಲಿರುವ ಲೇಖನಗಳೆಲ್ಲವೂ ಭಾರತದ ಸಾಮಾಜಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಬದುಕಿನ ವೈಶಿಷ್ಟ್ಯಗಳನ್ನು ಮುನ್ನಲೆಗೆ ತರುತ್ತವೆ ಮತ್ತು ಆ ಮೂಲಕ ಭಾರತದಲ್ಲಿ ಪ್ರಜಾತಂತ್ರದ ಅರ್ಥ ಮತ್ತು ಕ್ರಿಯಾಚರಣೆಗಳ ವಿಶೇಷಗಳ ಕುರಿತು ನಮ್ಮ ಗಮನ ಸೆಳೆಯುತ್ತವೆ.

ಈ ಕೃತಿಯಲ್ಲಿ ರಜನಿ ಕೊಠಾರಿಯವರ, "ಭಾರತದ ಪ್ರಜಾತಂತ್ರ ಎದುರಿಸುತ್ತಿರುವ ಸಮಸ್ಯೆಗಳು: ಒಂದು ಸಮೀಕ್ಷೆ" (Issues before Indian Democracy: An overview), ಡಿ.ಎಲ್ ಶೇಟ್‌ರವರ, "ರಾಜಕೀಯ ಅಧಿಕಾರದ ಬಿಕ್ಕಟ್ಟು" (The Crisis of Political Authority), ಜಾವೆದ್ ಆಲಂರವರ, "ಭಾರತದ ಪ್ರಜಾತಂತ್ರದೊಳಗೆ ಏನು ನಡೆಯುತ್ತಿದೆ?" (What is Happening Inside Indian Democracy), ಮನುರಂಜನ್ ಮೊಹಂತಿರವರ, "ಭಾರತದ ಪ್ರಜಾತಂತ್ರದ ತಾತ್ತ್ವಿಕತೆ" (Theorising Indian Democracy), ಸುಹಾಸ್ ಪಲ್ಶೀಕರ್‌ರವರ, "ಯಾರ ಪ್ರಜಾತಂತ್ರದ ಬಗ್ಗೆ ನಾವು

ಮಾತನಾಡುತ್ತಿದ್ದೇವೆ" (Whose Democracy Are We Talking About?) ಮೊದಲಾದ ಲೇಖನಗಳಿವೆ.

ಸುಪ್ರಸಿದ್ಧ ರಾಜಕೀಯ ಶಾಸ್ತ್ರಜ್ಞ ರಜನಿ ಕೊಠಾರಿಯವರು ತಮ್ಮ ಲೇಖನದಲ್ಲಿ ಭಾರತದ ಪ್ರಜಾತಂತ್ರ ಎದುರಿಸುತ್ತಿರುವ ಬಹುಬಗೆಯ ಸಮಸ್ಯೆಗಳನ್ನು ರಾಜಕೀಯ ಸಮಾಜಶಾಸ್ತ್ರದ ನೆಲೆಯಿಂದ ನಿಖರವಾಗಿ ಚರ್ಚಿಸುತ್ತಾರೆ. ಇನ್ನೊರ್ವ ಲೇಖಕ ದೀರುಭಾಯಿ ಶೇಟ್, ಭಾರತದ ರಾಜ್ಯಾಧಿಕಾರದ ಸ್ವರೂಪ ಮತ್ತು ಅದರ ವಿವಿಧ ವಿನ್ಯಾಸಗಳ ಪರಿಣಾಮಗಳ ಬಗ್ಗೆ ನಮ್ಮ ಗಮನ ಸೆಳೆಯುತ್ತಾರೆ ಮತ್ತು ಭಾರತದಲ್ಲಿ ಅಧಿಕಾರದ ಕೇಂದ್ರೀಕರಣದ ಸಮಸ್ಯೆಗಳ ಕುರಿತು ಇಲ್ಲಿ ಚರ್ಚಿಸಿದ್ದಾರೆ. ಜಾವೆದ್ ಆಲಂ, ತಮ್ಮ ವಿಶಿಷ್ಟವಾದ ಎಂಪಿರಿಕಲ್ ನೆಲೆಯ ವಿಮರ್ಶೆಯ ಮೂಲಕ ಭಾರತದ ಪ್ರಜಾತಂತ್ರದಲ್ಲಿ ಸಂಭವಿಸುತ್ತಿರುವ ಅನೇಕ ಬಗೆಯ ಪಲ್ಲಟಗಳ ಕುರಿತು ನಮ್ಮ ಗಮನ ಸೆಳೆಯುತ್ತಾರೆ. ಅಂತೆಯೇ, ಮನುರಂಜನ್ ಮೊಹಂತಿ, ತಮ್ಮ ಲೇಖನದಲ್ಲಿ ಭಾರತದ ಪ್ರಜಾತಂತ್ರದ ತಾತ್ತ್ವಿಕ ಜಿಜ್ಞಾಸೆಯನ್ನು ನಡೆಸಿದರೆ, ಸುಹಾಸ್ ಪಲ್ಸೀಕರ್, ಪ್ರಜಾತಂತ್ರ ಯಾವುದೇ ಸಮಾಜದಲ್ಲಿ ಎದುರಿಸಬೇಕಾದ ಮೂಲಭೂತ ಪ್ರಶ್ನೆಗಳ ಕುರಿತು ವಿವರವಾಗಿ ತಮ್ಮ ಲೇಖನದಲ್ಲಿ ಚರ್ಚಿಸುತ್ತಾರೆ.

6. ಆಲಂ, ಜಾವೆದ್. "ಹು ವಾಂಟ್ಸ್ ಡೆಮೊಕ್ರಸಿ", ಒರಿಯೆಂಟ್ ಬ್ಲಾಕ್‌ಸ್ವಾನ್: ಹೈದಾರಬಾದ್, 2004.

ಭಾರತದ ಪ್ರಮುಖ ರಾಜಕೀಯ ಶಾಸ್ತ್ರಜ್ಞ ಜಾವೆದ್ ಆಲಂರವರು ಬರೆದ "ಹು ವಾಂಟ್ಸ್ ಡೆಮೋಕ್ರಸಿ" ಎನ್ನುವ ಕೃತಿ ಭಾರತದ ಪ್ರಜಾತಂತ್ರದ ಪ್ರಮುಖ ಸವಾಲುಗಳ ಬಗ್ಗೆ ಚರ್ಚಿಸುತ್ತದೆ. 'ಭಾರತದ ಪ್ರಜಾತಂತ್ರ ಯಾರಿಗೆ ಬೇಕಾಗಿದೆ?' ಎನ್ನುವ ಅತ್ಯಂತ ಸಂಕೀರ್ಣವಾದ ಪ್ರಶ್ನೆಯನ್ನು ಅದರ ಎಲ್ಲ ನೆಲೆಗಳಲ್ಲಿ ಜಾವೆದ್ ಆಲಂರವರು ಈ ಗ್ರಂಥದಲ್ಲಿ ವಿಶ್ಲೇಷಿಸುತ್ತಾ, ಹೇಗೆ ಭಾರತದ ಪ್ರಜಾತಂತ್ರ ಹಳ್ಳಿಗಳಲ್ಲಿ ಇರುವ, ಹಿಂದುಳಿದ ಸಮುದಾಯಗಳಿಗೆ ಸೇರಿದ ಅನಕ್ಷರಸ್ಥ ಜನರಿಂದ

ಉಳಿದುಕೊಂಡಿದೆ ಎನ್ನುವುದನ್ನು ಈ ಅಧ್ಯಯನದಲ್ಲಿ ಅಂಕಿ–ಅಂಶಗಳ ಮೂಲಕ ತೋರಿಸಿಕೊಡುವ ಆಲಂ, ಪೇಟೆ–ಪಟ್ಟಣಗಳಲ್ಲಿರುವ ವಿದ್ಯಾವಂತ ಜನರಿಂದ ಪ್ರಜಾತಂತ್ರ ಉಳಿದುಕೊಳ್ಳುತ್ತದೆ ಎನ್ನುವ ಅಪಕಲ್ಪನೆಯನ್ನು ತನ್ನ ಅಧ್ಯಯನದ ಮೂಲಕ ಹುಸಿಗೊಳಿಸಿದ್ದಾರೆ.

7. ದಾಲ್, ರಾಬರ್ಟ್. "ಡೆಮೊಕ್ರಸಿ ಆ್ಯಂಡ್ ಇಟ್ಸ್ ಕ್ರಿಟಿಕ್ಸ್" ಎಲೆ ಯುನಿವರ್ಸಿಟಿ ಪ್ರೆಸ್: ಯು.ಕೆ, 2008.

ರಾಬರ್ಟ್ ದಾಲ್‌ರವರು ಪಾಂಡಿತ್ಯ ಪೂರ್ಣವಾಗಿ ಬರೆದಿರುವ "ಪ್ರಜಾತಂತ್ರ ಮತ್ತು ಅದರ ಟೀಕಾಕಾರರು" ಎನ್ನುವ ಕೃತಿ ಪ್ರಜಾತಂತ್ರ ಒಳಗೊಳ್ಳುವ ಅನೇಕ ತಾತ್ತ್ವಿಕ ಹಾಗೂ ಪ್ರಾಯೋಗಿಕ ಆಯಾಮಗಳನ್ನು ವಿಸ್ತೃತವಾಗಿ ಚರ್ಚಿಸುತ್ತದೆ. ಅಂತೆಯೇ, ಲೇಖಕರು ಪ್ರಜಾತಂತ್ರದ ಅನೇಕ ಪ್ರಮುಖ ಲೋಪದೋಷಗಳನ್ನು ಮತ್ತು ಅದರ ಮೇಲೆ ಬೇರೆ ಬೇರೆ ಕಾಲಘಟ್ಟಗಳಲ್ಲಿ ಮಾಡಲಾದ ಪ್ರಮುಖ ಆರೋಪಗಳನ್ನು ಈ ಕೃತಿಯಲ್ಲಿ ವಿಶ್ಲೇಷಿಸುತ್ತಾರೆ.

ಬಹುಶಃ, ಈ ಕೃತಿ ಪ್ರಜಾತಂತ್ರದ ಕುರಿತು ಸಮಗ್ರ ನೋಟವನ್ನು ಒದಗಿಸುವ ಅಪರೂಪದ ವಿಮರ್ಶೆಯಾಗಿ ಕಾಣಿಸುತ್ತದೆ. ಪ್ರಜಾತಂತ್ರದ ಚರಿತ್ರೆ, ವಿವಿಧ ಕಾಲಘಟ್ಟಗಳಲ್ಲಿ ಅದು ಪಡೆದುಕೊಂಡ ವಿವಿಧ ರೂಪಗಳು, ಪ್ರಜಾತಂತ್ರ ಇಂದು ಎದುರಿಸುತ್ತಿರುವ ಸವಾಲುಗಳು ಮತ್ತು ಅದರ ಭಾವಿ ಸಾಧ್ಯತೆಗಳು ಇವುಗಳೆಲ್ಲದರ ಕುರಿತು ವಿಸ್ತೃತವಾದ ಚರ್ಚೆಯನ್ನು ಈ ಗ್ರಂಥದಲ್ಲಿ ಕಾಣಬಹುದು.

8. ಕೀನ್, ಜಾನ್.'ಡೆಮಾಕ್ರಸಿ ಆ್ಯಂಡ್ ಸಿವಿಲ್ ಸೊಸೈಟಿ', ವಾರ್ಸೊ ಪಬ್ಲಿಕೇಶನ್ಸ್: ನ್ಯೂಯಾರ್ಕ್, 1988

18ನೇ ಶತಮಾನದ ಪ್ರಜಾತಂತ್ರದ ಚಿಂತನೆಯ ಪ್ರಮುಖ ಅಂಶಗಳನ್ನು ಪರಿಗಣಿಸುತ್ತಾ ಈ ಗ್ರಂಥ, ಯುರೋಪಿನ ಪ್ರಜಾತಂತ್ರ ಎದುರಿಸುತ್ತಿರುವ ಸವಾಲುಗಳ ವಿಶ್ಲೇಷಣೆಯನ್ನು ಮಾಡುತ್ತದೆ. ಪ್ರಜಾತಂತ್ರದ ಉಳಿಯುವಿಕೆ ಮತ್ತು ಬೆಳವಣಿಗೆಗೆ ಈ ಗ್ರಂಥ ಹೊಸ ಚಿಂತನೆಯನ್ನು ಪ್ರಸ್ತಾಪಿಸುವ

ಮೂಲಕ ನಮ್ಮ ವಿಶೇಷ ಗಮನವನ್ನು ಸೆಳೆಯುತ್ತದೆ. ಈ ಗ್ರಂಥದಲ್ಲಿ ಇರುವ ಎಲ್ಲ ಪ್ರಬಂಧಗಳು ಯುರೋಪಿನ ಪ್ರಜಾತಂತ್ರದ ಸಂಪ್ರದಾಯಗಳನ್ನು ಪುನರುಜ್ಜೀವನಗೊಳಿಸುವುದು ಮತ್ತು ಬೆಳೆಸುವುದು ಎಂಬ ಮೂಲಜಿಜ್ಞಾಸಿಕ ರಚನಾತ್ಮಕ ಚಿಂತನೆಯನ್ನು ಮಾಡುತ್ತದೆ. ಚಾರಿತ್ರಿಕವಾಗಿ ರೂಪಗೊಂಡ ಮುಕ್ತ ಧೋರಣೆಯ ನೆಲೆಯಲ್ಲಿ ಸ್ಫುಟಗೊಂಡ ಪರಿಕಲ್ಪನೆಗಳಿಂದ ಕೂಡಿದ ಪ್ರಜಾತಂತ್ರವನ್ನು ಪ್ರತಿಪಾದಿಸುವ ಈ ಗ್ರಂಥ ಹೇಗೆ ಅದರ ಉಳಿವಿಗೆ ವಿವೇಚನಾತ್ಮಕ ನೆಲೆಯ ನಾಗರಿಕ ಸಮಾಜದ ಅವಶ್ಯಕತೆಯಿದೆ ಎನ್ನುವುದನ್ನು ನಿರೂಪಿಸುತ್ತದೆ.

ನಾಗರಿಕ ಸಮಾಜದ ಕಲ್ಪನೆಯನ್ನು ಪ್ರಜಾತಾಂತ್ರಿಕತೆಯ ಕೇಂದ್ರ ವಸ್ತುವನ್ನಾಗಿಸುವ ಈ ಗ್ರಂಥ ಯುರೋಪಿನ ಬೌದ್ಧಿಕ ಚರಿತ್ರೆಯ ಹಿನ್ನೆಲೆಯಲ್ಲಿ ಪ್ರಜಾತಂತ್ರದ ಹೊಸ ಅಪಾಯಗಳ ಮತ್ತು ಸಾಧ್ಯತೆಗಳ ಕುರಿತು ಬೊಟ್ಟು ಮಾಡಿ ತೋರಿಸುತ್ತದೆ.

9. ಕೊತಾರಿ, ರಜನಿ. "ರಿ ಥಿಂಕಿಂಗ್ ಡೆಮೊಕ್ರಸಿ", ಓರಿಯಂಟ್ ಬ್ಲಾಕ್ ಸ್ವಾನ್: ನವದೆಹಲಿ, 2010

ರಜನಿ ಕೊತಾರಿ ಭಾರತದ ಪ್ರಪ್ರಥಮ ರಾಜಕೀಯಶಾಸ್ತ್ರಜ್ಞ ಎಂದು ಗುರುತಿಸಬಹುದಾದ ಚಿಂತಕ. ಅವರು ಭಾರತದ ರಾಜಕಾರಣದ ಕುರಿತು ಬರೆದಿರುವ ಅನೇಕ ಪ್ರೌಢ ಲೇಖನಗಳು ಭಾರತದ ರಾಜಕೀಯಶಾಸ್ತ್ರದ ಇತಿಹಾಸದಲ್ಲಿ ಮಹತ್ವದ ಸ್ಥಾನವನ್ನು ಪಡೆದುಕೊಳ್ಳುತ್ತದೆ. ತಮ್ಮ ಪ್ರಖರವಾದ ಚಿಂತನಾಶೀಲತೆಯಿಂದಾಗಿ ಭಾರತದ ರಾಜಕಾರಣದ ಕುರಿತಾದ ತಮ್ಮ ನಿಲುವುಗಳನ್ನು ಮರುಪರಿಶೀಲಿಸುತ್ತಾ ಬಂದಿರುವ ಕೊತಾರಿ ತಮ್ಮ "ಪ್ರಜಾತಂತ್ರದ ಮರುಚಿಂತನೆ" ಎನ್ನುವ ಕೃತಿಯಲ್ಲಿ ತಾನು ಈಗಾಗಲೇ ಪ್ರತಿಪಾದಿಸಿದ ಭಾರತದ ರಾಜಕಾರಣದ ಕುರಿತಾದ ತಾತ್ತ್ವಿಕ ಪ್ರಮೇಯಗಳ ಹಿನ್ನಲೆಯಲ್ಲಿ ಭಾರತದ ಪ್ರಜಾತಂತ್ರದ ನಿಷ್ಕರ್ಷೆಯನ್ನು ಮಾಡುತ್ತಾರೆ.

ಅವರ ಪ್ರಕಾರ, ಭಾರತದ ಸಮಾಜ ಒಂದು ಸಮಗ್ರವಾದ ಆಂತರಿಕ ಪರಿವರ್ತನೆಯ ಪ್ರಕ್ರಿಯೆಯನ್ನು ಎದುರಿಸುತ್ತಿದೆ. ಈ ಆಂತರಿಕ ಪ್ರಕ್ರಿಯೆ ಭಾರತೀಯ ಬದುಕಿನ ಎಲ್ಲ ಸ್ತರಗಳಿಗೆ ವ್ಯಾಪಿಸಿದೆ. ಹಾಗಾಗೀ, ಭಾರತೀಯ ಪ್ರಜಾತಂತ್ರದ ವಿಮರ್ಶೆ ಈ ದೇಶದ ಸಮಾಜ ಮತ್ತು ಸಂಸ್ಕೃತಿಗಳ ನೆಲೆಯಲ್ಲಿ ಸಂಭವಿಸುತ್ತಿರುವ ಬದಲಾವಣೆಗಳನ್ನು ಪ್ರಮುಖವಾಗಿ ಗಮನಿಸಬೇಕಾಗುತ್ತದೆ.

ಸಮಕಾಲೀನ ಭಾರತ ತನ್ನಲ್ಲಿರುವ ವರ್ಗ, ಜಾತಿ, ಕೋಮುವಾದ ಮೊದಲಾದ ಬಾಹ್ಯ ಮುಖಾಮುಖಿಗಳ ನಡುವೆ ಹೇಗೆ ಸ್ವಾತಂತ್ರ್ಯ ಮತ್ತು ಸ್ವಾಯತ್ತತೆಯನ್ನು ಉಳಿಸಿಕೊಳ್ಳುವುದು ಎಂಬ ಚಿಂತನೆಯನ್ನು ಮಾಡಬೇಕಾಗಿದೆ ಎಂದು ಲೇಖಕರು ಈ ಕೃತಿಯಲ್ಲಿ ವಾದಿಸುತ್ತಾರೆ. ಸಾಂಘಿಕ ಅಸಮತೋಲನಗಳನ್ನು ಸರಿದೂಗಿಸುವ ಮತ್ತು ಜನರ ಕ್ಷೇಮಾಭಿವೃದ್ಧಿಯ ಬಗ್ಗೆ ಚಿಂತಿಸುವ ರಾಜಕೀಯ ಪ್ರಕ್ರಿಯೆಗಳ ಮೇಲೆ ಲೇಖಕರು ನಂಬಿಕೆಯಿಡುತ್ತಾರೆ. ನೈಜ ಬದಲಾವಣೆಗಳು ಆಗಬೇಕಾದದ್ದು ಪ್ರಜಾತಂತ್ರ ಪ್ರಕ್ರಿಯೆಯ ಕೆಳಹಂತಗಳಲ್ಲಿ ಎಂದು ವಾದಿಸುವ ಕೊತಾರಿ, ಈ ಹೊಸ ಬದಲಾವಣೆ ಜನರಲ್ಲಿ ರಾಜಕೀಯ ಮತ್ತು ಅಭಿವೃದ್ಧಿ ಹೊಂದುವ ಪ್ರಜ್ಞೆಯನ್ನು ಬೆಳೆಸುತ್ತದೆ ಎನ್ನುತ್ತಾರೆ. ತಮ್ಮ ಈ ಗ್ರಂಥದಲ್ಲಿ ಅವರು ಭಾರತ ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸುವ ಕುರಿತು ಎರಡು ಮಹತ್ವದ ಅಂಶಗಳನ್ನು ಪ್ರಸ್ತಾಪಿಸುತ್ತಾರೆ.

1. ಸಮಸ್ಯೆಗಳ ಕಾರಣವನ್ನು ಪರೀಕ್ಷಿಸದೆ ಅದನ್ನು ವಿವರಿಸುವುದರಿಂದ ಏನನ್ನೂ ಸಾಧಿಸಲು ಸಾಧ್ಯವಿಲ್ಲ
2. ಭಾರತದ ಆಂತರಿಕ ಪ್ರಕ್ರಿಯೆಯನ್ನು ಸೂಕ್ತವಾಗಿ ಗ್ರಹಿಸದೆ ಯಾವುದೇ ಸವಾಲುಗಳನ್ನು ಎದುರಿಸಲು ಸಾಧ್ಯವಿಲ್ಲ. ಕೊತಾರಿಯವರ ಈ ಗ್ರಂಥ ಭಾರತದ ಪ್ರಜಾತಂತ್ರದ ಇಂದಿನ ವಾಸ್ತವದ ಕುರಿತು ನಡೆಯುವ ಚರ್ಚೆಗಳಲ್ಲಿ ಪ್ರಮುಖವಾಗಿ ಗಮನಿಸಬೇಕಾದ ಕೃತಿ.

10. ಮೆಹ್ತಾ, ವಿ.ಆರ್ ಮತ್ತು ಪಾಂಥಮ್, ಥೋಮಸ್. (ಸಂ) "ಪೊಲಿಟಿಕಲ್ ಐಡಿಯಾಸ್ ಇನ್ ಮಾಡರ್ನ್ ಇಂಡಿಯಾ: ಥಿಮಾಟಿಕ್ ಎಕ್ಸ್‌ಪ್ಲೋರೇಶನ್ಸ್", ಸೇಜ್ ಪಬ್ಲಿಕೇಶನ್ಸ್: ನವದೆಹಲಿ, 2006

"ಆಧುನಿಕ ಭಾರತದ ರಾಜಕೀಯ ವಿಚಾರಗಳು" ಎನ್ನುವ ಈ ಬೃಹತ್ ಸಂಕಲನ 19 ಮತ್ತು 20ನೇ ಶತಮಾನಗಳಲ್ಲಿ ಭಾರತದಲ್ಲಿ ಉತ್ಕರ್ಷಕ್ಕೆ ಬಂದ ವೈವಿಧ್ಯಮಯ ಸಾಂಸ್ಕೃತಿಕ, ಸಾಮಾಜಿಕ ಹಾಗೂ ರಾಜಕೀಯ ವಿಚಾರಗಳ ಮತ್ತು ಸಿದ್ಧಾಂತಗಳ ನಿಷ್ಕರ್ಷೆಯನ್ನು ಮಾಡುತ್ತದೆ. ಆಧುನಿಕ ಭಾರತದ ಚಿಂತನ ವಿಶ್ವದ ಕುರಿತು ವಿಶೇಷ ಪರಿಣಿತಿ ಇರುವ ಅನೇಕ ವಿದ್ವಾಂಸರುಗಳ ಲೇಖನಗಳನ್ನು ಈ ಕೃತಿಯ ಸಂಪಾದಕರು ನಿರ್ದಿಷ್ಟವಾದ ವಿಷಯ ಸೂಚಿಗಳಲ್ಲಿ ವಿಂಗಡಿಸಿ ಸಂಘಟಿಸಿದ್ದಾರೆ.

ಈ ಸಂಪಾದಿತ ಕೃತಿಯಲ್ಲಿ ಈ ಕೆಳಗಿನ ಪ್ರಮುಖ ವಿಚಾರಗಳ ಕುರಿತು ಆಯಾ ಕ್ಷೇತ್ರಗಳಲ್ಲಿ ಪರಿಣಿತರಾದ ಲೇಖಕರುಗಳ ಸಂಶೋಧನಾ ಬರಹಗಳಿವೆ. ಅವುಗಳಲ್ಲಿ ಈ ಕೆಳಗಿನ ವಿಷಯಗಳು ಪ್ರಮುಖವಾಗಿ ಕಾಣಿಸುತ್ತವೆ. ಭಾರತದಲ್ಲಿ ಹಕ್ಕಿನ ಕಲ್ಪನೆ, ಸಮಾನತೆಯ ಕುರಿತಾದ ಜಿಜ್ಞಾಸೆ, ಸ್ವಾತಂತ್ರ್ಯದ ಚಿಂತನೆ, ಸಾಮಾಜಿಕ ನ್ಯಾಯದ ಕುರಿತಾದ ವಾಗ್ವಾದ, ಸಾಂವಿಧಾನಿಕ ಅಡಳಿತದ ಬಗೆಗಿನ ವಿಚಾರಗಳು, ಸ್ವರಾಜ್ಯ, ಸ್ವದೇಶಿ ಮೊದಲಾದ ಪರಿಕಲ್ಪನೆಗಳ ಜಿಜ್ಞಾಸೆ, ಗಾಂಧೀಜಿಯವರ ಹಿಂದ್ ಸ್ವರಾಜ್‌ನ ವಿಮರ್ಶೆ, ಹಿಂದುತ್ವವೆನ್ನುವ ಸೈದ್ಧಾಂತಿಕ ರಾಜಕಾರಣದ ನಿಷ್ಕರ್ಷೆ ಹಾಗೂ ಭಾರತದ ಸಮ್ಮಿಶ್ರ ಸಂಸ್ಕೃತಿಗಳ ಬಗೆಗಿನ ಚಿಂತನೆಗಳು ಒಳಗೊಂಡಿವೆ.

ಈ ಬೃಹತ್ ಗ್ರಂಥದಲ್ಲಿ ಪಾರ್ಥ ಚಟರ್ಜಿ, ದೀಪೇಶ್ ಚಕ್ರವರ್ತಿ, ಫ್ರೆಡ್ ದಾಲ್‌ಮಿಯರ್, ಪ್ರತಾಪ್ ಬಾನು ಮೆಹ್ತಾ, ವೆಲೆರಿಯನ್ ರೋಡ್ರಿಗಸ್, ಮುಸಿರಲ್ ಹಸನ್, ಹರೀಶ್ ತ್ರಿವೇದಿ, ನಿವೇದಿತಾ ಮೆನನ್, ಉಪೇಂದ್ರ ಭಕ್ಷಿ, ಬಿಕು ಪಾರೆಕ್, ರಾಜೀವ್ ಭಾರ್ಗವ್, ಜಾವೆದ್ ಆಲಂ

ಮೊದಲಾದ ಪ್ರಖ್ಯಾತ ಭಾರತೀಯ ಚಿಂತಕರ ಲೇಖನಗಳಿವೆ. ಈ ಕೃತಿ ಆಧುನಿಕ ಭಾರತದ ಚಿಂತನಾ ವಿಶ್ವದ ಸಮಗ್ರ ನೋಟವನ್ನು ಮತ್ತು ಅದರ ಬಹುರೂಪತೆಯನ್ನು ನಮ್ಮ ಮುಂದೆ ಸಾದರಪಡಿಸುತ್ತದೆ.

11. ಮೆಹ್ತಾ, ಅಶೋಕ್. "ರಿಫ್ಲೆಕ್ಷನ್ಸ್ ಆನ್ ಸೋಶಿಯಲಿಸ್ಟ್ ಇರಾ", ಎಸ್. ಚಾಂದ್ ಆ್ಯಂಡ್ ಕೊ ಲಿಮಿಟೆಡ್: ನವದೆಹಲಿ, 1977

ಭಾರತದ ಸಮಾಜವಾದಿ ಆಂದೋಲನದ ಪ್ರಮುಖ ನಾಯಕರಲ್ಲಿ ಒಬ್ಬರಾದ ಅಶೋಕ ಮೆಹ್ತಾ ಬರೆದಿರುವ ಈ ಕೃತಿ ಕೇವಲ ಭಾರತೀಯ ಸಮಾಜವಾದದ ಚರ್ಚೆಯನ್ನು ಮಾತ್ರ ಮಾಡದೇ ತನ್ನ ಕಾಲದ ವಿಭಿನ್ನ ಬಗೆಯ ಸೈದ್ಧಾಂತಿಕ ಪ್ರಬೇಧಗಳ, ಚಾರಿತ್ರಿಕ ಪ್ರಕ್ರಿಯೆಗಳ ಹಾಗೂ ರಾಜಕೀಯ ವಿದ್ಯಮಾನಗಳ ವಿಶ್ಲೇಷಣೆಯನ್ನು ನಡೆಸುತ್ತದೆ. ಮೆಹ್ತಾ, ಕಾಂಗ್ರೆಸ್ ಸಮಾಜವಾದಿ ಪಕ್ಷದ ಸ್ಥಾಪಕ ಸದಸ್ಯರಾಗಿ ಮತ್ತು "ಕಾಂಗ್ರೆಸ್ ಸೋಶಿಯಲಿಸ್ಟ್" ಎನ್ನುವ ಪತ್ರಿಕೆಯ ಪ್ರಧಾನ ಸಂಪಾದಕರಾಗಿ 20ನೆಯ ಶತಮಾನದ ವಿವಿಧ ವಿದ್ಯಮಾನಗಳ ಕುರಿತಾಗಿ ತಮ್ಮ ಟೀಕೆ ಟಿಪ್ಪಣಿಗಳನ್ನು ಮಾಡಿದ್ದಾರೆ. ಆ ಟೀಕೆ ಟಿಪ್ಪಣಿಗಳಲ್ಲಿ ಕೆಲವು ಮಹತ್ವಪೂರ್ಣವೆನಿಸಿಕೊಳ್ಳುವ ಬರಹಗಳು ಈ ಪುಸ್ತಕದಲ್ಲಿ ಕಾಣಸಿಗುತ್ತವೆ. ರಾಷ್ಟ್ರವಾದ, ಪ್ರಜಾತಂತ್ರ, ಕ್ರಾಂತಿಯ ಸ್ವರೂಪ, ಸಾಮಾಜಿಕ ಪ್ರಜಾಪ್ರಭುತ್ವದ ಸಂದಿಗ್ಧಗಳು, ಲೆನಿನ್ ಮತ್ತು ಮಾವೋರವರ ಚಿಂತನೆಯ ನೆಲೆಗಳು, ಗಾಂಧಿ ರಾಜಕಾರಣದ ಮಹತ್ವ, ನೆಹರೂರವರ ದುರಂತ ಮೊದಲಾದ ಲೇಖನಗಳು ಈ ಕೃತಿಯಲ್ಲಿ ಕಾಣಬಹುದು. ಮೆಹ್ತಾರವರ ಪಾಂಡಿತ್ಯ ಪೂರ್ಣ ಚಿಂತನೆಯನ್ನು ಮತ್ತು ಮೊನಚಾದ ವಿಶ್ಲೇಷಣಾ ಕ್ರಮಗಳನ್ನು ನಮಗೆ ಈ ಕೃತಿ ಪರಿಚಯಿಸುತ್ತದೆ. ಸ್ವಾತಂತ್ರ್ಯ ಪೂರ್ವಕಾಲದಲ್ಲಿ ಯುವ ಕಾಂಗ್ರೆಸ್ ನಾಯಕರಾಗಿ ಮತ್ತು ಸ್ವಾತಂತ್ರ್ಯೋತ್ತರ ಕಾಲದಲ್ಲಿ ಭಾರತದ ಸಮಾಜವಾದದ ಪ್ರಖರ ತಾತ್ತ್ವಿಕ

ವಕ್ತಾರರಾಗಿ ಮೆಹ್ತಾ ಭಾರತೀಯ ಸಮಾಜವಾದದ ಪ್ರಜಾತಾಂತ್ರಿಕ ರಾಜಕಾರಣದ ಸಮಗ್ರ ಪರಿಚಯವನ್ನು ಹಾಗೂ ವಿಮರ್ಶಾ ನೋಟವನ್ನು ನಮಗೆ ಈ ಕೃತಿಯಲ್ಲಿ ಒದಗಿಸಿದ್ದಾರೆ.

12. ಕೊಠಾರಿ, ರಜನಿ. "ಪೊಲಿಟಿಕ್ಸ್ ಇನ್ ಇಂಡಿಯಾ", ಓರಿಯಂಟ್ ಬ್ಲಾಕ್ ಸ್ವಾನ್: ನವದೆಹಲಿ, 2012

ಈ ಗ್ರಂಥ ಭಾರತದ ರಾಜಕಾರಣದ ಒಂದು ಸಮಗ್ರ ಸಾಮಾಜಿಕ ನೋಟ. ಇದು ಹೇಗೆ ಭಾರತದ ರಾಜಕಾರಣ ಜಾತಿ ಸಮುದಾಯಗಳ ಹಿತಾಸಕ್ತಿಗಳ ಒತ್ತಡಗಳಿಂದ ರೂಪುಗೊಂಡಿದೆ ಎನ್ನುವುದನ್ನು ವಿಸ್ತೃತವಾದ ಮತ್ತು ಸತ್ಯಾಂಶದ ನೆಲೆಯ ವಿಶ್ಲೇಷಣೆಗಳ ಮೂಲಕ ತೋರಿಸಿಕೊಡುತ್ತದೆ ಹಾಗೂ ಭಾರತದ ಪ್ರಜಾತಾಂತ್ರಿಕ ರಾಜಕಾರಣದಲ್ಲಿ ಜಾತಿ ಎಷ್ಟು ನಿರ್ಣಾಯಕವಾದ ಪಾತ್ರವನ್ನು ವಹಿಸುತ್ತದೆ ಎನ್ನುವುದನ್ನು ವಿಷದೀಕರಿಸುತ್ತದೆ.

ಅನೇಕ ವ್ಯಾಖ್ಯಾನಕಾರರ ಪ್ರಕಾರ ರಜನಿ ಕೊಠಾರಿಯವರು ತಮ್ಮ "ಪೊಲಿಟಿಕ್ಸ್ ಇನ್ ಇಂಡಿಯಾ" ಪುಸ್ತಕದಲ್ಲಿ ನೀಡಿರುವ ಭಾರತೀಯ ಸಮಾಜದ ನಿರೂಪಣೆ ಎಂಪಿರಿಕಲ್ ನೆಲೆಯಲ್ಲಿ ಶ್ರೀಮಂತವಾದದ್ದು ಹೌದಾದರೂ, ಅದು ಭಾರತೀಯ ಸಮಾಜದ ಪ್ರಜಾತಾಂತ್ರಿಕ ಪರಿವರ್ತನೆಗೆ ಅಗತ್ಯವಿರುವ ಮೌಲಿಕ ನೋಟವನ್ನು ಒದಗಿಸುವುದಿಲ್ಲ ಎಂದು ಟೀಕಿಸಿದ್ದಾರೆ. ಹಾಗಾಗಿ, ಕೊಠಾರಿಯವರಲ್ಲಿ ನಮಗೆ ಕಾಣಸಿಗುವುದು. ಭಾರತದ ಸಾಮಾಜಿಕ ರಾಜಕಾರಣದ ವಿವರಣೆಯೇ ಹೊರತು ಸಾಮಾಜಿಕ ಪರಿವರ್ತನೆಯ ಮಾರ್ಗ ಸೂತ್ರಗಳಲ್ಲ ಎನ್ನುವ ಆಪಾದನೆಯನ್ನು ಅವರು ನಿರಂತರವಾಗಿ ಎದುರಿಸುತ್ತಾ ಬಂದಿದ್ದಾರೆ.

13. ಕೇಲ್ಕರ್, ಇಂದುಮತಿ. "ಡಾ. ರಾಮಮನೋಹರ ಲೋಹಿಯಾ: ಹಿಸ್ ಲೈಫ್ ಆ್ಯಂಡ್ ಫಿಲಾಸಫಿ", ಅನಾಮಿಕ ಪಬ್ಲಿಕೇಶನ್ಸ್: ನವದೆಹಲಿ, 2009

ರಾಮಮನೋಹರ ಲೋಹಿಯಾರವರ ಹತ್ತಿರದ ಒಡನಾಡಿಯಾಗಿದ್ದ ಇಂದುಮತಿ ಕೇಲ್‌ಕರ್‌ರವರು ಬರೆದ ಈ ಜೀವನ ಕಥನ, ಲೋಹಿಯಾರ ಉತ್ಕಟವಾದ ಸಾರ್ವಜನಿಕ ಬದುಕಿನ ಸಮಗ್ರನೋಟವನ್ನು ನಮಗೆ ನೀಡುತ್ತದೆ. ದಟ್ಟವಾದ ಪೌರಣಿಕ ಪ್ರಪಂಚವನ್ನು ಒಳಗೊಳ್ಳುವ ಅವರ ಬಾಲ್ಯ ಜೀವನ, ತನ್ನ ತಂದೆಯ ಕಾರಣದಿಂದಾಗಿ ಸ್ವಾತಂತ್ರ್ಯ ಹೋರಾಟದ ಜೊತೆಗಿನ ಅವರ ನಿಕಟ ಸಂಬಂಧ, ಕಲ್ಕತ್ತ ಮತ್ತು ಜರ್ಮನಿಯಲ್ಲಿ ಅವರು ಪಡೆದುಕೊಂಡ ಶೈಕ್ಷಣಿಕ ಪ್ರಭಾವಗಳು, ಸಮಾಜವಾದಿ ರಾಜಕಾರಣವನ್ನು ಅವರು ಪ್ರವೇಶಿಸಿದ ರೀತಿ, ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಅವರ ಮಹತ್ವದ ಪಾತ್ರ, ಭಾರತ ವಿಭಜನೆಯ ಕುರಿತಾದ ಅವರ ನಿಲುವುಗಳು, ಗೋವಾ ವಿಮೋಚನೆಯ ಹೋರಾಟದಲ್ಲಿ ಲೋಹಿಯಾರ ಪಾತ್ರ ಹಾಗೂ ಸ್ವಾತಂತ್ರ್ಯೋತ್ತರ ಭಾರತದ ರಾಜಕಾರಣದಲ್ಲಿ ಅವರು ನಡೆಸಿದ ಹೋರಾಟಗಳು ಮತ್ತು ನಡುಪ್ರವೇಶಗಳು ಇವೆಲ್ಲವುಗಳನ್ನು ಕೇಲ್ಕರ್ ಸಾಕಷ್ಟು ವಿವರವಾಗಿ ಈ ಕೃತಿಯಲ್ಲಿ ನಮ್ಮ ಮುಂದೆ ಇರಿಸಿದ್ದಾರೆ.

ಕೇಲ್ಕರ್‌ರವರೇ ಹೇಳುವಂತೆ, ಪ್ರಸ್ತುತ ಕೃತಿ ಲೋಹಿಯಾ ಬದುಕಿನ ವೃತ್ತಾಂತ ಮಾತ್ರವಲ್ಲ ಅದು ಅವರ ಚಿಂತನ ಪ್ರಪಂಚದ ರೂಪುಗೊಳ್ಳುವಿಕೆಯ ರೀತಿಯನ್ನು ಗುರುತಿಸಲು ಯತ್ನಿಸುತ್ತದೆ. ಹಾಗಾಗಿ, ಈ ಕೃತಿ ಲೋಹಿಯಾರ ರಾಜಕೀಯ ಬದುಕಿನ ವಿವಿಧ ಕಾಲಘಟ್ಟಗಳನ್ನು ಗುರುತಿಸುವ ಜೊತೆ ಜೊತೆಗೆ ಅವರ ಚಿಂತನೆಯಲ್ಲಾದ ಪ್ರಮುಖ ಪಲ್ಲಟಗಳನ್ನು ದಾಖಲಿಸುತ್ತದೆ.

14. ಕೊಠಾರಿ, ರಜನಿ. "ಸ್ಟೇಟ್ ಎಗೈನ್ಸ್ಟ್ ಡೆಮೋಕ್ರಸಿ: ಇನ್ ಸರ್ಚ್ ಆಫ್ ಹ್ಯೂಮನ್ ಗವರ್ನನ್ಸ್", 1989

ಇದು 1980ರ ಕಾಲಾವಧಿಯಲ್ಲಿ ರಜನಿ ಕೊಠಾರಿಯವರು ಬರೆದ ಬಹು ಮಹತ್ವದ ಕೃತಿ. ಈ ಕೃತಿಯಲ್ಲಿ ಸಂವಿಧಾನ ಬದ್ಧವಾಗಿ ಅಸ್ತಿತ್ವಕ್ಕೆ ಬರುವ ರಾಜ್ಯ ಪ್ರಜಾತಂತ್ರದಲ್ಲಿ ಹುದುಗಿರುವ ಪ್ರತಿಶೇಧದಿಂದಾಗಿಯೇ ಒಂದು ಕಾಲಾವಧಿಯಲ್ಲಿ ಹೇಗೆ ಬಹುಸಂಖ್ಯಾತ ನೆಲೆಯ ಅಧಿಕಾರಶಾಹಿ ರಾಜ್ಯವಾಗಿ ಪರಿವರ್ತಿತವಾಗುತ್ತದೆ ಎನ್ನುವುದನ್ನು ಲೇಖಕರು ತೋರಿಸಿಕೊಡುತ್ತಾರೆ. ಭಾರತದ ಪ್ರಜಾತಂತ್ರದ ಜಿಜ್ಞಾಸೆಯ ಶೈಕ್ಷಣಿಕ ಅಧ್ಯಯನದಲ್ಲಿ ಕೊಠಾರಿಯವರ ಈ ಕೃತಿಗೆ ಮಹತ್ವದ ಸ್ಥಾನವಿದೆ.

15. ಘೋಶ್, ಶಂಕರ್. "ಪೊಲಿಟಿಕಲ್ ಐಡಿಯಾಸ್ ಆ್ಯಂಡ್ ಮೂವ್‌ಮೆಂಟ್ಸ್ ಇನ್ ಇಂಡಿಯಾ", ಅಲೈಡ್ ಪಬ್ಲಿಕೇಶನ್ಸ್: ನವದೆಹಲಿ, 1975

ಶಂಕರ್ ಘೋಶ್‌ರವರು ಬರೆದಿರುವ ಈ ವಿಶಾಲ ಕೃತಿ, ಆಧುನಿಕ ಭಾರತದಲ್ಲಿ ಉತ್ಪನ್ನಗೊಂಡ ಬಹುಬಗೆಯ ಸೈದ್ಧಾಂತಿಕ ವಿದ್ಯಮಾನಗಳ ಕುರಿತು ಮತ್ತು ವಿಭಿನ್ನ ಸ್ವರೂಪದ ಹೋರಾಟಗಳ ಕುರಿತು ಸವಿವರವಾದ ಚಿತ್ರಣವನ್ನು ನೀಡುತ್ತದೆ. 19ನೇ ಶತಮಾನದ ಆದಿಭಾಗದಿಂದ ಪ್ರಾರಂಭಿಸಿ, 20ನೇ ಶತಮಾನದ ಕೊನೆಯ ಭಾಗದ ತನಕ ಭಾರತದಲ್ಲಿ ನಡೆದ ಬಹುತೇಕ ಎಲ್ಲ ವಿದ್ಯಮಾನಗಳನ್ನು ಇದು ಒಳಗೊಳ್ಳುತ್ತದೆ. ಈ ಅರ್ಥದಲ್ಲಿ ಪ್ರಸ್ತುತ ಕೃತಿಯನ್ನು ಆಧುನಿಕ ಭಾರತದ ಚರಿತ್ರೆ ಮತ್ತು ರಾಜಕಾರಣಗಳ ಬಗೆಗಿನ ಒಂದು ಮಹತ್ವದ ಪುಸ್ತಕವೆಂದು ಪರಿಗಣಿಸಬಹುದು.

ಸುಮಾರು 30ಕ್ಕೂ ಹೆಚ್ಚು ಅಧ್ಯಾಯಗಳಿರುವ ಈ ಬೃಹತ್ ಕೃತಿ ರಾಷ್ಟ್ರವಾದದ ಚಿಂತನೆಗಳು, ಸಾಂವಿಧಾನಿಕ ಸರಕಾರದ ಬಗೆಗಿನ ವಿಚಾರಗಳು, ಬಂಗಾಳಿ ಪುನರುಜ್ಜೀವನದ ಚಿಂತಕರ ವಿವಿಧ ನೋಟಗಳು, ಕಾಂಗ್ರೆಸ್ ಸಂಘಟನೆಯ ಒಳಗೆ ಕಂಡುಬರುವ ವಿಭಿನ್ನ ಧೋರಣೆಗಳು, ಸ್ವಾತಂತ್ರ್ಯ,

ಸಮಾನತೆ ಮತ್ತು ಸಾಮಾಜಿಕ ನ್ಯಾಯದಂತಹ ವಿಚಾರಗಳ ಕುರಿತು ಭಾರತೀಯ ಚಿಂತಕರ ದೃಷ್ಟಿಕೋನಗಳು, ಸಮಾಜವಾದದ ಉದಯ, ಕಮ್ಯುನಿಷ್ಟ್ ಚಳುವಳಿಯ ವಿಶ್ಲೇಷಣೆ, ರೈತ ಹಾಗೂ ಕಾರ್ಮಿಕ ಹೋರಾಟಗಳ ವೃತ್ತಾಂತ, ಹಿಂದುಳಿದ ಜಾತಿ ಅಸ್ಮಿತೆಗಳ ರಾಜಕಾರಣ ಮೊದಲಾದ ಸಂಗತಿಗಳನ್ನು ಒಳಗೊಂಡಿವೆ.

ಕೃತಿಯ ಸ್ವರೂಪ ಎಂಪಿರಿಕಲ್ ನೆಲೆಯದ್ದಾದರೂ, ಲೇಖಕರ ಶೈಕ್ಷಣಿಕ ಪ್ರೌಢಿಮೆಯಿಂದಾಗಿ ಅನೇಕ ತಾತ್ತ್ವಿಕ ಒಳನೋಟಗಳನ್ನು ಈ ಕೃತಿಯಲ್ಲಿ ಕಾಣಬಹುದು. ಹೀಗಾಗಿ, ಆಧುನಿಕ ಭಾರತದ ಚರಿತ್ರೆ, ಸಮಾಜ, ಆರ್ಥಿಕತೆ ಹಾಗೂ ರಾಜಕಾರಣಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ಆಸಕ್ತರಾದವರಿಗೆ ಇದು ಉತ್ತಮ ಪ್ರವೇಶಿಕೆ ಎನಿಸಿಕೊಳ್ಳುತ್ತದೆ.

ಅಧ್ಯಯನ ಒಳಗೊಳ್ಳುವ ವಿವಿಧ ಅಧ್ಯಾಯಗಳು:

ಅಧ್ಯಾಯ–1 : ಪ್ರಸ್ತಾವನೆ

ಮೊದಲನೆಯ ಪ್ರಾಸ್ತಾವಿಕ ಅಧ್ಯಾಯ ಈ ಸಂಶೋಧನಾ ಮಹಾಪ್ರಬಂಧ ಆಯ್ಕೆ ಮಾಡಿಕೊಂಡಿರುವ ವಿಷಯದ ರೂಪುರೇಷೆಗಳನ್ನು ವಿಸ್ತೃತವಾಗಿ ಮುಂದಿಡುತ್ತದೆ. ಅಂತೆಯೇ, ಆಯ್ಕೆ ಮಾಡಿದ ವಿಷಯದ ಸಮಸ್ಯಾ ಭೂಮಿಕೆಯನ್ನು ವಿಸ್ತಾರವಾಗಿ ಚರ್ಚಿಸುತ್ತದೆ. ಜೊತೆಯಲ್ಲಿಯೇ, ಅಧ್ಯಯನದ ಮಹತ್ವ ಹಾಗೂ ವ್ಯಾಪ್ತಿಗೆ ಸಂಬಂಧಿಸಿದ ಅನೇಕ ಅಂಶಗಳನ್ನು ಇದು ಸಾದರಪಡಿಸುತ್ತದೆ. ಅಷ್ಟು ಮಾತ್ರವಲ್ಲದೇ, ಆಯ್ಕೆ ಮಾಡಿದ ವಿಷಯಕ್ಕೆ ಸಂಬಂಧಿಸಿದ ಸಂಶೋಧನಾ ಪ್ರಮೇಯಗಳನ್ನು, ಪ್ರಶ್ನೆಗಳನ್ನು ಮತ್ತು ವಿಧಾನದ ಸ್ವರೂಪವನ್ನು ಕೂಡ ಇಲ್ಲಿ ಚರ್ಚಿಸಲಾಗಿದೆ. ಅಂತಿಮವಾಗಿ ಅಧ್ಯಯನದ ವಿಷಯದ ವ್ಯಾಪ್ತಿಗೆ ಬರುವ ಒಂದು ವಿಸ್ತೃತವಾದ ಸಾಹಿತ್ಯಾವಲೋಕನವನ್ನು ಈ ಪ್ರಾಸ್ತವಿಕ ಅಧ್ಯಾಯ ಒಳಗೊಂಡಿದೆ.

ಅಧ್ಯಾಯ–2: ಪ್ರಜಾತಂತ್ರದ ಭಾರತೀಯ ಸಂದರ್ಭ

ಈ ಮಹಾಪ್ರಬಂಧದ ಎರಡನೆಯ ಅಧ್ಯಾಯ ಮುಖ್ಯವಾಗಿ ಭಾರತೀಯ ಪ್ರಜಾತಂತ್ರದ ಕುರಿತಾದ ಶೈಕ್ಷಣಿಕ ನಿಷ್ಕರ್ಷೆಯನ್ನು ಮಾಡುತ್ತದೆ. ಈ ಅಧ್ಯಾಯದಲ್ಲಿ ಕಳೆದ 50 ವರ್ಷಗಳಲ್ಲಿ ಜಾಗತಿಕವಾಗಿ ಪ್ರಜಾತಂತ್ರದ ತಾತ್ತ್ವಿಕತೆ ಮತ್ತು ಕ್ರಿಯಾಚರಣೆಗೆ ಸಂಬಂಧಿಸಿ ನಡೆದ ವಾಗ್ವದದ ಕೆಲವು ಮಹತ್ವದ ಅಂಶಗಳನ್ನು ಪ್ರಸ್ತುತಪಡಿಸಲಾಗಿದೆ. ಅಂತೆಯೇ, ಭಾರತದ ಪ್ರಜಾತಂತ್ರದ ಚರಿತ್ರೆ ಹಾಗೂ ತಾತ್ತ್ವಿಕತೆಯ ಕುರಿತು ಈ ಅಧ್ಯಯನದ ಚೌಕಟ್ಟಿಗೆ ಅನುಗುಣವಾಗಿ ಚರ್ಚಿಸಲಾಗಿದೆ.

ಅಧ್ಯಾಯ–3: ಭಾರತದ ಸಮಾಜವಾದಿ ಚಿಂತನೆಯ ವಿವಿಧ ಮಜಲುಗಳು

ಮಹಾಪ್ರಬಂಧದ ಮೂರನೆಯ ಈ ಅಧ್ಯಾಯ ಭಾರತದ ಸಮಾಜವಾದಿ ರಾಜಕಾರಣದ ಚರಿತ್ರೆ ಹಾಗೂ ತಾತ್ತ್ವಿಕತೆಯ ಕುರಿತು ವಿಸ್ತೃತವಾದ ನಿರೂಪಣೆಯನ್ನು ಒದಗಿಸುತ್ತದೆ ಮತ್ತು ಆ ಮೂಲಕ ಭಾರತದ ಸಮಾಜವಾದಿ ರಾಜಕಾರಣದ ವಿಶೇಷಗಳನ್ನು ಮತ್ತು ವೈಶಿಷ್ಟ್ಯಗಳನ್ನು ಮುನ್ನೆಲೆಗೆ ತರಲು ಯತ್ನಿಸಿದೆ. ಜೊತೆಯಲ್ಲಿಯೇ, ಭಾರತದ ಸಮಾಜವಾದಿ ಚಿಂತನೆಯ ಪ್ರಮುಖ ವಕ್ತಾರುಗಳಾದ ರಾಮಮನೋಹರ ಲೋಹಿಯಾ, ಜಯಪ್ರಕಾಶ್ ನಾರಾಯಣ್ ಮತ್ತು ಆಚಾರ್ಯ ನರೇಂದ್ರ ದೇವರವರ ಸಮಾಜವಾದಿ ಚಿಂತನೆಯ ಮುಖ್ಯಾಂಶಗಳನ್ನು ಇಲ್ಲಿ ಪ್ರಸ್ತಾಪಿಸಲಾಗಿದೆ.

ಅಧ್ಯಾಯ–4: ಭಾರತದ ಪ್ರಜಾತಂತ್ರದ ಕುರಿತು ಸಮಾಜವಾದಿ ಚಿಂತಕರ ವ್ಯಾಖ್ಯಾನಗಳು ಮತ್ತು ನಡುಪ್ರವೇಶಗಳು

ಪ್ರಸ್ತುತ ಅಧ್ಯಯನದ ನಾಲ್ಕನೆಯ ಅಧ್ಯಾಯ ಭಾರತದ ಪ್ರಜಾತಂತ್ರದ ಸಿದ್ಧಾಂತ ಮತ್ತು ರಾಜಕಾರಣಕ್ಕೆ ಭಾರತದ ಸಮಾಜವಾದಿ ಚಿಂತಕರು ನೀಡಿರುವ ಕೊಡುಗೆಗಳನ್ನು ಮುಂದಿಡುತ್ತದೆ.

ವಿಶೇಷವಾಗಿ ಭಾರತದ ಸಮಾಜವಾದಿ ಚಿಂತಕರಲ್ಲಿ ಅತ್ಯಂತ ಪ್ರಮುಖರೆಂದು ಈ ಅಧ್ಯಯನ ಗುರುತಿಸಿರುವ ಲೋಹಿಯಾ, ಜಯಪ್ರಕಾಶ್ ನಾರಾಯಣ್ ಮತ್ತು ನರೇಂದ್ರದೇವರು ಭಾರತದ ಪ್ರಜಾತಂತ್ರಕ್ಕೆ ನೀಡಿರುವ ವಿಶೇಷ ಚಿಂತನೆಗಳನ್ನು ಇಲ್ಲಿ ಪರಿಶೀಲಿಸಲಾಗಿದೆ.

ಅಧ್ಯಾಯ–5: ಪರಿಸಮಾಪ್ತಿಯ ಕೆಲವು ಮಾತುಗಳು

ಪ್ರಸ್ತುತ ಅಧ್ಯಯನದ ಪರಿಸಮಾಪ್ತಿಯ ಈ ಅಧ್ಯಾಯ ಹಿಂದಿನ ನಾಲ್ಕೂ ಅಧ್ಯಾಯಗಳಲ್ಲಿ ಮಂಡಿಸಲಾದ ವಿಷಯಗಳನ್ನು ಮತ್ತು ವಿಚಾರಗಳನ್ನು ಸಂಕ್ಷಿಪ್ತವಾಗಿ ಮರುನಿರೂಪಿಸುವ ಕೆಲಸವನ್ನು ಮಾಡಿದೆ. ಅಂತೆಯೇ, ಹಿಂದಿನ ನಾಲ್ಕು ಅಧ್ಯಯಗಳಲ್ಲಿ ಪ್ರಸ್ತಾಪಿಸದೆ ಕೈಬಿಟ್ಟು ಹೋದ ಅಂಶಗಳನ್ನು ನಮೂದಿಸಲು ಯತ್ನಿಸಿದೆ.

Bibliography

1. Arora, V.K. “Rammanohar Lohia and Socialism in India”, Pune: Deepa and Deepa Publication,1984
2. Anisa, Mukhtara. & Dikshita, Vijayakanta. “Lohia, Many Faceted Personality”, Lucknow: Rammanohar Lohia Samrika Samiti, 1984.
3. Austin, Granville. “The Indian constitution: cornorstone of a Nation”, New Delhi: Oxford University Press, 1966
4. Bali, Dev Raj. “Modern Indian Thought: Ram Mohan to M.N. Roy”, New Delhi: Sterling Publishers Pvt Ltd, 1980
5. Bali, Dev Raj. “Modern Indian Throught: Rammohan Roy to Jayaprakash Narayan”, New Delhi: Sterling publishers Pvt Ltd, 1980

6. Basu, Kaushik. “The Retreat of Democracy”, New Delhi: Permanent Black, 2011

7. Berman, Sheri. Social Democracy and the Making of Europe's Twentieth Century. Cambridge University Press, 2006

8. Bernstein, Eduard. “Evolutionary Socialism: A Criticism and Affirmation”, Independent Labour Party,1907

9. Bhargava, Rajeev.(ed) “Politics and Ethics of the Indian Constitution”, New Delhi: Oxford University Press, 2008

10. Bhatia, Udit. “The Indian Constituent Assembly: Deliberations on Democracy”, London: Routlegde Tyolor & Francies Group, 2018

11. Bhatt, Amitabh. “Marx, Gandhi and Socialism”, New Delhi: Centrum Press Anmol, 2013

12. Bose, Sugata. & Jalal, Ayesha. (ed) “Nationalism, Democracy and Development State and Politics in India”, New Delhi: Oxford University Press, 1997

13. Bronowski, Jacob & Bronowski, Mazlish. “The Western Intellectual Tradition” Harpercollins, 1960

14. Chandra, Bipan. “Indian National Movement: Long Term Dynamics”, New Delhi: Har Anand Publications, 2008

15. Chandra, Bipan. “In the name of Democracy: JP Movement and Emergency” Gurogon: Penguin Randam House India, 2017

16. Chandra, Bipan, et al. "India's Struggle for Independence: 1857-1947", Penguin: New Delhi, 2016.

17. Connor, Walter D. "Socialism, Politics and Equality", New York: Columbia University Press, 1979

18. Cunningham, Frank. "Democratic Theory and Socialism", New York: Cambridge University Press, 1987

19. Dahl, Robert. "Democracy and its critics", London: Yale University Press, 1991

20. Deva, Acharaya Narendra. & Meherally, Yusuf. (ed) "Socialism and the National Revolution", Bombay: Padma Publications Ltd, 1946

21. Doctor, Adi Hormusji. "JP's Total Revolution- An Exercise in Utopia", New Delhi: Seema Publications, 1987

22. Dryzek, John. S. "Deliberative Democracy and Beyond: Liberals, Critics, Contestations", UK: Oxford University Press, 2002

23. Elliott, Carolyn. M.(ed) "Civil Society and Democracy: A Reader", New Delhi: Oxford University Press, 2006

24. Engels, Friedrich. '"Socialism Utopian and Scientific", Create Space Independent Pulishing Platform, 1980

25. Gajrani, Shiv. & Ram, S. "Kamaladevi Chattopadhayaya: Socio-Economic Plight of Women", New Delhi: Common Wealth Publishers Pvt Ltd, 2012

26. Girdner, Eddie James. “Socialism, Sarvodaya & Democracy- The Theoretical Contribution of M.N. Roy, J.P. Narayan & J.B. Kripalani”, New Delhi: Gyan Publishing House, 2013

27. Guha, Ramchandra. “Makers of Modern India”, Gurgaon: Penguin publication, 2010

28. Gupta, Asha. “Socialism in Theory & Practice: Narendra Deva’s Contribution”, New Delhi: Gitanjali Publishing House, 1987

29. Gupta, Ram Chandra. “JP: From Marxism to Total Revolution”, New Delhi: Sterling Publishers Pvt Ltd, 1981

30. Gupta, R.C. “Great Political Thinkers: East and West”, Agra, Uttar Pradesh: Lakshmi Narian Agarwal,1963

31. Halappai, G.S. “Dilemmas of Democratic Politics in India”, Bombay: Manaktalas & Sons Pvt Ltd, 1966

32. Hobbes, Thomas & Macpherson, C.(ed) “Leviathan”, New Delhi: Penguin Classics, 1981

33. Iyengar, T.S. Rajagopal. “Indian Democracy Speaks”, Mysore: University of Mysore, 1979

34. Kapoor, Mastram. (ed) “Collected works of Dr. Rammanohar Lohia Volume 9”, New Delhi: Anamika Publishers & Distributor Pvt. Ltd, 2011

35. Kashyap, Subhash C. “Democracy & Good Governance – some guidelines for the Today’s Parliamentarians”, New Delhi: Vitasta Publishing Pvt Ltd, 2017

36. Kaviraj, Sudepith. Panthan, Thomas. & Deutsch, Kenneth. L (ed) “The Heteronymous Radicalism of M.N. Roy in Modern Political Thought”, New Delhi: Sage Publication, 1986

37. Keane, John. “Democracy and Civil Society”, New York: University of Westmin, 1988

38. Keen, John. “Democracy and Civil Society”, New York: Varse Publications, 1988

39. Kelkar, Indumati. “Dr. Rammanohar Lohia: His Life and Philosophy”, New Delhi: Anamika Publishers and Distributors Pvt Ltd, 2009

40. Kohli, Atul. “Democracy and Development in India: From Socialism to Pro-business”, New Delhi: Oxford University Press, 2010

41. Kothari, Rajni. “Rethinking Democracy”, New Delhi: Orient Blackswan Private Ltd:, 2005

42. Kothri, Rajani. “Politics in India”, Orient Blackswan Pvt Ltd: New Delhi, 2012

43. K, Arora.V. “Rammanohar Lohia and Socialism in India” Pune: Deepa and Deepa Publication, 1984

44. Laski, Harold J. “Liberty in the Modern State”, Gurgaon: Penguin Random House India, 1930.

45. Locke, John. "Locke: Two Treatises of Government", New Delhi: Cambridge University Press, 1967

46. Luard, Evan. "Socialism Without the State", London: The Macmillan Press Ltd, 1979

47. Lunn, Arnold. "Revolutionary Socialism: In Theory and Practices" London: Left Book Club, 1989

48. Macpherson, C.B. "The Political Theory of Possessive Individualism: Hobbes to Locke", New Delhi:Oxford University Press,1962

49. Mahajan, Gurpreet. (ed) "Democracy, Difference and Social Justice", New Delhi: Oxford University Press, 2000

50. Makhnenko, Aleksandr Kharitonovich. "The State Law of Socialist Countries", Moscow: Progress Publishers, 1976

51. Mehta, Ashok. "Reflections on Socialist Era", New Delhi: S Chand & Company Ltd, 1977

52. Mehta, V.R. & Pantham, Thomas. "Political Ideas in Modern India: Thematic Explorations (History of Science)", New Delhi: Sage Publication, 2006

53. Metha, Pratap Bhanu. "Burden of Democracy", Gurgoan: Pengiun Randam House Ltd, 2017

54. Mitra, Subrata K. & Singh, V.B. "Democracy and Social change in India: A cross-Sectional Analysis of the National Electrote", New Delhi: Sage Publications, 1999

55. Mill, John Stuart, “On Liberty”, Cambridge: Hackett Publishing House,1859

56. Mill, John Stuart. “Considerations on Representative Government”, London: Parker Son and Bourn Publication: 1861

57. Mirdal, Jan. “India Waits”, Lake View Press: Chicago, 1980

58. Modi, Ranjan. “Democracy & Good Governance”, Jaipur: Mangal Deep publication, 2005.

59. Mukherjee, Subrata. & Ramaswamy, Sushila. “A History of Socialist thought: From the Precursors to the Present”, New Delhi: Sage Publication, 2000

60. Narayan, Jayaprakash. “ Why Socilaism”, All India Congress Socialist Party, 1936

61. Narayan, Jayaprakash. ‘*My Picture of Socialism*’ AK Chandrasekhara Mudaliar, 1949.

62. Patnaik, Prabhat. “Re-Envisioning Socialism”, New Delhi: Tulika Books, 2012

63. Pradhan, Benudhar. “The Socialist Thought of Mahatma Gandhi Vol 1”, New Dehi: GDK publications, 1980

64. Prasad, Bimal.(ed) “Jayaprakash Narayan, essential Writings, 1929-1979: A Centenary Volume, 1902-2002”, New Delhi: Konark Publishers Pvt Ltd, 2002

65. Prasad, Bimal (ed). “Jayaprakash Narayan Collected Works Vol. 2(1936-1939)”, New Delhi: Manohar Publishers & Distributors, 2002

66. Reddy, A.V. Rathna. “Political Philosopher & Swami Vivekananda”, New Delhi: Stosius Inc/Advent Book Divison, 1984

67. Reddy, A.V Rathna. “The Political Philosophy of Swami Vivekananda”, New Delhi: Sterling Publication Pvt Ltd, 1984

68. Reddy, G.K.C. “Fifty Years of Socialist Movement in India: Retrospect and Prospects”, New Delhi: Samata Era Publication, 1984

69. River, Charles. “Western Democracy: The History and Legacy of Representative Governments in the west from the Ancient world to today”, USA: Charles River Editors, 2020

70. Rodrigues, Valerian. (ed) “The Essential Writings of B.R Ambedkar”, New Delhi: Oxford University Press, 2002

71. Rousseau, Jean-Jacques. “Rousseau: The Social Contract and other later Political writings”. Cambridge University Press, 2018, First edition -1762

72. Sabine, George Holland. “A History of Political Theory”, US: Dryden Press, 1937

73. Sahai, Krishna. “Socialist Movement in India”, New Delhi: Classical Publishing Company, 1986

74. Sartori, Giovanni. “Democratic Theory”, New Delhi: Oxford & IBK publishing co, 1965

75. Sastri, Prakash. “Socialist Thought in India, with special reference to Lohia’s Quest for Indigenous Socialism”, New Delhi: Roopa Publication, 1985

76. Schumpeter, Joseph. A. “Capitalism, Socialism & Democracy”, London: Routledge Publishers Ltd, 1976

77. Singer, Peter. ‘Marx: A Very Short Introduction’, UK: Oxford University Press, 1980

78. Singh, Mahendra Prasad. & Roy, Himanshu. (ed) “Indian Political Thought: Themes and Thinkers”, New Delhi: Pearson Education, 2017

79. Singh, Sanjay.(ed) “Reading Lohia: Perspectives of the Youth”, Lucknow: Rapid Book Services, 2013

80. Singh, Chanchika. “Communist and Socialist Movement in India”, New Delhi: Mittal Publications, 1987

81. Singh, Randhir. “Marxism, Socialism, Indian Politics: A View from the Left”, New Delhi: Aakar Books, 2008

82. Sinha, Sachchidananda. “Socialism and Power”, New Delhi: Anamika Publisher and Distributor Ltd, 2015

83. Sharma, Hari Dev. “Selected works of Acharya Narendra Deva: 1941-1948”. Hyderbad: Radiant Publishers, 1998

84. Shastri, Prakash C. “Socialist thought in India”, Jaipur: Print well Publishers: Jaipur, 1985

85. Sheth, D.L. & Nandy, Ashis. “The Multiverse of Democracy: Essays in Honour of Rajni Kothari”, New Delhi: Sage Publication, 1996

86. Tipathi, Amales. "Indian National Congress and the Struggle for freedom 1885-1947", Oxford University Press: New Delhi, 2014

87. Tudor, Henry, Tudor, J.M (eds). 'Marxism and Social Democracy The revisionist Debate, 1896-1898', Cambridge University Press: Cambridge, 1988

88. Varma, Vishwanth Prasad. & Agarwal, Lakshmi Narain. "Modern Indian Political thought", Agra: Educational publishers, 1987

89. Vora, Rajendra & Pulshikar, Suhas. (ed) "Indian Democracy: Meanings and Practices", New Delhi: Sage Publications, 2004

90. Wolker, Robert. "Rousseau: a very Short Introduction", New Delhi: Oxford University Press, 2001

ಪರಾಮರ್ಶನ ಗ್ರಂಥಗಳು:

1. ಸುರೇಶ್, ಕೆ.ಜೆ. "ಪಾಶ್ಚಿಮಾತ್ಯ ರಾಜಕೀಯ ಚಿಂತನೆ", ಮೈಸೂರು: ಚೇತನ್ ಬುಕ್ ಹೌಸ್, 2015

2. ಬಸು, ದುರ್ಗಾದಾಸ್. "ಭಾರತದ ಸಂವಿಧಾನ ಪರಿಚಯ", ಹರಿಯಾಣ: ಲೆಕ್ಸಿಸ್ ನೆಕ್ಸಿಸ್ ಪಬ್ಲಿಕೇಷನ್ಸ್, 2013

3. ಗುಹಾ, ರಾಮಚಂದ್ರ. & ರಾವ್, ಜಿ.ಎನ್. ರಂಗನಾಥ್. (ಅನುವಾದ) "ನವ ಭಾರತದ ನಿರ್ಮಾಪಕರು", ಬೆಂಗಳೂರು: ವಸಂತ ಪ್ರಕಾಶನ, 2013

4. ಬಾಪೂ, ಹೆದ್ದೂರ ಶೆಟ್ಟಿ. “ಸಮಾಜವಾದ ಜನತಂತ್ರ ಮತ್ತು ಕಮ್ಯೂನಿಷ್ಟ್”, ಶಿವಮೊಗ್ಗ: ಅಕ್ಷರ ಪ್ರಕಾಶನ, 1989

5. ದೇವ, ಆಚಾರ್ಯ ನರೇಂದ್ರ. “ಜನತಾಂತ್ರಿಕ ಸಮಾಜವಾದ”, ಬೆಂಗಳೂರು: ಜನಪ್ರಕಾಶನ, 1982

6. ನಾಗಭೂಷಣ, ಡಿ.ಎಸ್. “ಜಯಪ್ರಕಾಶ್ ನಾರಾಯಣ– ಒಂದು ಅಪೂರ್ಣಕ್ರಾಂತಿಯ ಕಥೆ”, ಶಿವವೊಗ್ಗ: ಲೋಹಿಯಾ ಪ್ರಕಾಶನ, 2003

7. ಸುರಕೋಡ, ಹಸನ್ ನಯೀಂ. (ಸಂ0 “ಸಪ್ತಕ್ರಾಂತಿ, ಕಾಂಚನ ಮುಕ್ತಿ ಇತ್ಯಾದಿ ಲೋಹಿಯಾ ಅವರ ಹತ್ತು ಬಿಡಿ ಲೇಖನಗಳು”, ಶಿವಮೊಗ್ಗ: ಜನ್ಮಶತಾಬ್ಧಿ ಪ್ರತಿಷ್ಠಾನ, 2014

8. ನಾಗಭೂಷಣ, ಡಿ.ಎಸ್. “ಲೋಹಿಯಾ ಸಮಾಜವಾದದ ದರ್ಶನ” ತುಮಕೂರು: ನೆಲಸಿರಿ ಪ್ರಕಾಶನ, 2006

9. ಸುಬ್ಬಣ್ಣ, ಕೆ.ವಿ. “ರಾಮಮನೋಹರ ಲೋಹಿಯಾ ಅವರ ರಾಜಕೀಯದ ಮಧ್ಯೆ ಬಿಡುವು” ಸಾಗರ: ಅಕ್ಷರ ಪ್ರಕಾಶನ, 1970

10. ಓಂಕಾರ್, ಶರದ್. & ಸುರಕೋಡ, ಹಸನ್ ನಯೀಂ. (ಅನುವಾದ) “ಲೋಹಿಯಾ”, ಬಳ್ಳಾರಿ: ಲೋಹಿಯಾ ಪ್ರಕಾಶನ, 2000

11. ಓಂ, ಪ್ರಕಾಶ್ ದೀಪಕ್ & ಹೇಮಾ ಮತ್ತು ತಿಪ್ಪೇಸ್ವಾಮಿ. (ಅನುವಾದ) “ಡಾ. ಲೋಹಿಯಾ”, ಧಾರವಾಡ: ಪುಸ್ತಕ ಪ್ರಕಾಶನ, 1978

12. ಸ್ವಾಮಿ. ಕೆ.ಎಸ್. ನಾರಾಯಣ. (ಅನುವಾದ) “ಜೆ.ಪಿ. ಸೆರೆಮನೆಯ ದಿನಚರಿ”, ಬೆಂಗಳೂರು: ಕರ್ನಾಟಕ ಸರ್ವೋದಯ ಸಾಹಿತ್ಯ ಸಮಿತಿ, 1977.

13. ಕೆ.ಬಿ, ಮೇರುನಂದನ್. ‘ಭಾರತದ ಸಂವಿಧಾನ– ಒಂದು ಪರಿಚಯ”, ಬೆಂಗಳೂರು: ಮೆರಗು ಪ್ರಕಾಶನ, 2015

14. ನಾಗಭೂಷಣ, ಡಿ.ಎಸ್. “ಲೋಹಿಯಾ ಜೊತೆಯಲ್ಲಿ... (ಮಾರ್ಕ್ಸ್, ಗಾಂಧಿ, ಲೋಹಿಯಾ – ಅಂಬೇಡ್ಕರ್ ಕುರಿತ ಬರಹಗಳು), ಶಿವಮೊಗ್ಗ: ಗೀತಾಂಜಲಿ ಪುಸ್ತಕ ಪ್ರಕಾಶನ, 2014

15. ಶೆಟ್ಟಿ, ಬಾಪು ಹೆದ್ದೂರ. “ಸಮಾಜವಾದ ಜನತಂತ್ರ ಮತ್ತು ಕಮ್ಯುನಿಸಿಮ್”, ಸಾಗರ: ಅಕ್ಷರ ಪ್ರಕಾಶನ, 1989

16. ಶೆಟ್ಟಿ, ಬಾಪು ಹೆದ್ದೂರ. “ಆಚಾರ್ಯ ನರೇಂದ್ರದೇವ”, ಬೆಂಗಳೂರು: ಜನಪ್ರಕಾಶನ, 1996

17. ಶೆಟ್ಟಿ, ಬಾಪು ಹೆದ್ದೂರ. “ಲೋಹಿಯಾ ವ್ಯಕ್ತಿ ಮತ್ತು ವಿಚಾರ ಒಂದು ವಿಭಿನ್ನ ವಿಮರ್ಶೆ”, ಗದಗ: ಲಡಾಯಿ ಪ್ರಕಾಶನ, 2011

18. ದೇವ, ಆಚಾರ್ಯ ನರೇಂದ್ರ. “ಜನತಾಂತ್ರಿಕ ಸಮಾಜವಾದ”, ಬೆಂಗಳೂರು: ಜನ ಪ್ರಕಾಶನ, 1982

19. ನಾಗಭೂಷಣ್, ಟಿ.ಎಸ್. “ಮರಳಿ ಬರಲಿದೆ ಸಮಾಜವಾದ”, ಬಳ್ಳಾರಿ: ಲೋಹಿಯಾ ಪ್ರಕಾಶನ, 2007

20. ನಾಗಭೂಷಣ್, ಟಿ.ಎಸ್. “ಲೋಹಿಯಾ: ವ್ಯಕ್ತಿ ವಿಚಾರ ವಿಮರ್ಶೆ”, ಧಾರವಾಡ: ಲೋಹಿಯಾ ಪ್ರಕಾಶನ, 1980

21. ಯಂ, ಸ್ವೀಜಿ ಪಾಲ್. “ಸಮಾಜವಾದ ಪರಿಚಯ”, ಬೆಂಗಳೂರು: ಪ್ರಸಾರಂಗ, 1983

22. ತೋಳ್ಪಾಡಿ, ರಾಜಾರಾಮ್. “ಮತ್ತೆ ಮತ್ತೆ ಲೋಹಿಯಾ”, ಶಿವಮೊಗ್ಗ: ಅಹರ್ನಿಶಿ ಪ್ರಕಾಶನ, 2011

23. ನಾಗಭೂಷಣ್, ಟಿ.ಎಸ್. “ಜಯಪ್ರಕಾಶ್ ನಾರಾಯಣ್ ಒಂದು ಅಪೂರ್ಣ ಕ್ರಾಂತಿಯ ಕಥೆ” ಮೈಸೂರು: ಅಭಿರುಚಿ ಪ್ರಕಾಶನ, 2003

24. ಹೆಗಡೆ, ರಾಜಾರಾಮ. ಮತ್ತು ಎ, ಷಣ್ಮುಖ. (ಸಂ) "ಕೊಟ್ಟ ಕುದುರೆಯನೇರಲರಿಯದೆ", ಶಿರಸಿ, ಉತ್ತರ ಕನ್ನಡ: ನಿಲುಮೆ ಪ್ರಕಾಶನ, 2015

25. ಮಹಾಬಲ, ಯದೂರ. "ಲೋಹಿಯಾ ವಿಚಾರಗಳ ಒಂದು ವಿಮರ್ಶೆ", ಬೆಂಗಳೂರು: ಚಿಂತನ ಚಿಲುಮೆ ಪ್ರಕಾಶನ, 2017

26. ಎಲ್. ಶ್ರೀಕಂಠಯ್ಯ. "ಸಮಾಜವಾದ", ಮೈಸೂರು: ಮೈಸೂರು ವಿಶ್ವವಿದ್ಯಾನಿಲಯ, 1985

27. ಪ್ರಭಾಕರ, ಎ. ಎಸ್. ಮತ್ತು ಶೆಟ್ಟಿ, ಶ್ರೀಪಾದ. "ಲೋಹಿಯಾ: ವರ್ತಮಾನದ ಮುಖಾಮುಖಿ", ಹಂಪಿ: ಪ್ರಸಾರಂಗ ಕನ್ನಡ ವಿಶ್ವವಿದ್ಯಾನಿಲಯ

28. ತೋಳ್ಪಾಡಿ, ರಾಜಾರಾಮ್. ಮತ್ತು ನಯನ (ಸಂ). "ಸಮಾಜವಾದ: ಒಂದು ವಾಚಿಕೆ", ಶಿವಮೊಗ್ಗ: ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, 2017

29. ಹುಳಿಯಾರ್, ನಟರಾಜ್. "ಸಮಕಾಲೀನ ಲೋಹಿಯಾ: ರಾಮಮನೋಹರ ಲೋಹಿಯಾ ವಾಚಿಕೆ", ಬೆಂಗಳೂರು: ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, 2019

30. ಹುಳಿಯಾರ್, ನಟರಾಜ್. "ಮನುಕುಲದ ಏಕತೆ: ರಾಮಮನೋಹರ ಲೋಹಿಯಾ ಬರಹಗಳು ಸಂಚಿಕೆ – 4" ಬೆಂಗಳೂರು: ಚಿಂತಾಮಣಿ ಕೂಡ್ಲಕೆರೆ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, 2000

31. ವಿಜಯ, ಮಂಗ್ಯೂರ. "ಲೋಹಿಯಾ ಚಿಂತನೆಯ ಪ್ರಸ್ತುತತೆ", ಬೆಂಗಳೂರು: ಶ್ರೀ ಕಾಡುಮಲ್ಲೇಶ್ವರ ಗೆಳೆಯರ ಬಳಗ, 2010